# ECHO OF HIS CALL

# ಯೇಸು ಕ್ರಿಸ್ತನ ಕರೆಯ ಪ್ರತಿಧ್ವನಿ KANNADA

ECHO OF HIS CALL 1969-2019 GOLDEN JUBILEE

India's National Spiritual Newspaper

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAANS

**Editor : S. SAM SELVA RAJ** | **16 Languages** | **Associate Editor : Rev. R. Rama Krishna**

**Vol. XXII** | **YEAR OF OUR LORD JESUS CHRIST, 2020 FEBRUARY** | **No. 4**


## ಪವಿತ್ರ ಬೈಬಲ್

**ಈ ಭಾಗವನ್ನು ಬಾಯಿಪಾಠ ಮಾಡಿರಿ. ದೇವರಿಗೆ ಸ್ತೋತ್ರವಾಗಲಿ!**

(ಕೀರ್ತನೆ 20:1-9)

1. ಇಕ್ಕಟ್ಟಿನಲ್ಲಿ ಯೆಹೋವನು ನಿನ್ನ ಪ್ರಾರ್ಥನೆಯನ್ನು ಕೇಳಲಿ. ಯಾಕೋಬನ ದೇವರ ನಾಮವು ನಿನ್ನನ್ನು ಉದ್ಧಾರ ಮಾಡಲಿ.
2. ತನ್ನ ಪರಿಶುದ್ಧ ನಿವಾಸದಿಂದ ನಿನಗೆ ಸಹಾಯ ಮಾಡಲಿ. ಚೆಯೋನಿನಿಂದ ನಿನಗೆ ಆಧಾರ ದಯಪಾಲಿಸಲಿ.
3. ನೀನು ಸಮರ್ಪಿಸಿದ ನೈವೇದ್ಯಗಳು ಆತನ ನೆನಪಿಗೆ ಬರಲಿ. ನೀನು ಮಾಡಿದ ಸರ್ವಾಂಗ ಹೋಮಗಳು ಆತನಿಗೆ ಮೆಚ್ಚಿಗೆಯಾಗಲಿ.
4. ಆತನು ನಿನ್ನ ಇಷ್ಟಾರ್ಥವನ್ನು ನೆರವೇರಿಸಲಿ. ನಿನ್ನ ಎಲ್ಲಾ ಸಂಕಲ್ಪಗಳನ್ನು ಸಫಲ ಮಾಡಲಿ.
5. ನಿನ್ನ ಜಯದಲ್ಲಿ ಉತ್ಸಾಹಧ್ವನಿ ಮಾಡುವೆವು. ನಮ್ಮ ದೇವರ ಹೆಸರಿನಲ್ಲಿ ಧ್ವಜ ಎತ್ತುವೆವು. ಯೆಹೋವನು ನಿನ್ನ ಎಲ್ಲಾ ವಿಜ್ಞಾಪನೆಗಳನ್ನು ನೆರವೇರಿಸಲಿ.
6. ಯೆಹೋವನು ತಾನು ಅಭಿಷೇಕಿಸಿದ ಅರಸನಿಗೆ ಜಯವನ್ನು ಅನುಗ್ರಹಿಸುವನೆಂದು ಈಗ ನನಗೆ ಗೊತ್ತಾಯಿತು. ಆತನು ತನ್ನ ಪವಿತ್ರ ಲೋಕದಿಂದ ಅವನ ಪ್ರಾರ್ಥನೆಗೆ ಸದುತ್ತರವನ್ನು ಕೊಡುವನು. ತನ್ನ ಭುಜಬಲದಿಂದ ಅವನಿಗೆ ವಿಜಯವನ್ನುಂಟು ಮಾಡುವನು.
7. ಕೆಲವರು ರಥಬಲದಲ್ಲಿ, ಕೆಲವರು ಅಶ್ವಬಲದಲ್ಲಿ ಹೆಚ್ಚಳ ಪಡುತ್ತಾರೆ. ನಾವಾದರೋ ನಮ್ಮ ದೇವರಾದ ಯೆಹೋವನಲ್ಲಿಯೇ.
8. ಅವರು ಬಿದ್ದು ಹೋಗಿದ್ದಾರೆ. ನಾವಾದರೂ ಎದ್ದು ನಿಂತಿದ್ದೇವೆ.
9. ಯೆಹೋವನೇ ನಮ್ಮ ಅರಸನಿಗೆ ಜಯವನ್ನುಂಟು ಮಾಡು. ನಾವು ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸು.

# ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಿರಿ !

# Frame your future yourself!

**"ನಿಮ್ಮ ದೇವರಾದ ಯೆಹೋವನನ್ನು ಪ್ರೀತಿಸಿ ಆತನ ಮಾತಿಗೆ ವಿಧೇಯರಾಗಿರ್ರಿ. ಆತನನ್ನು ಹೊಂದಿಕೊಂಡೇ ಇರ್ರಿ. ಆತನು ಪ್ರಮಾಣ ಮಾಡಿಕೊಟ್ಟ ದೇಶದಲ್ಲಿ ನೀವು ಬದುಕಿಕೊಳ್ಳುವುದಕ್ಕೂ ಬಹುಕಾಲ ಇರುವುದಕ್ಕೂ ಆತನೇ ಆದಾರ..."!**

(ಧರ್ಮೋ ಪರದೇಶಕಾಂಡ 30:20)

**(ಪ್ರಸಂಗಿಸಿದವರು : ಪ್ರಮುಖ ಆಲಯದಲ್ಲಿ ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರು)**

ಜನರು ಈ ಲೋಕದಲ್ಲಿ ಯಾವ ತೊಂದರೆಯಿಲ್ಲದೆ ದೀರ್ಘವಾದ ಜೀವನವನ್ನು ನಡೆಸಲು ಅನೇಕ ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ. ಈ ಕಾರ್ಯದಲ್ಲಿ ಅನೇಕರು ಗೆಲ್ಲುತ್ತಾರೆ. ಬಹಳ ಮಂದಿ ಸೋಲನ್ನು ಅನುಭವಿಸುತ್ತಾರೆ. ಈ ಒಂದು ಪರಿಸ್ಥಿತಿಯಲ್ಲಿ ಗೆದ್ದವರು ಎಲ್ಲರೂ ವಿದ್ಯಾವಂತರಲ್ಲ ಮತ್ತು ಎಲ್ಲಾ ವಿದ್ಯಾವಂತರು ಗೆಲ್ಲುವವರಲ್ಲ. ಜಗತ್ತಿನಲ್ಲಿ ಗೆಲ್ಲಬೇಕಾದರೆ ದೇವರ ಕರುಣೆ ಮತ್ತು ಕೃಪೆಯನ್ನು ಹೊಂದಿಕೊಂಡವರಾಗಬೇಕು.

ದೇವರ ಮಕ್ಕಳು ಯಾರು ತನ್ನ ಮೇಲೆ ಅಚಲವಾದ ನಂಬಿಕೆಯನ್ನು ಇಟ್ಟುಕೊಂಡಿದ್ದಾರೋ ಅವರಿಗೆ ಅನೇಕ ಆಶೀರ್ವಾದಗಳನ್ನೂ ಹೊಸದಾದ ಉಪಕರಣಗಳನ್ನೂ ದಯಪಾಲಿಸಿದ್ದಾನೆ. ಈಗಿನ ಕಾಲದಲ್ಲಿ ನಾವು ವಿದ್ಯುತ್ಶಕ್ತಿ, ಅನೇಕ ತರಹದ ಬಲ್ಬುಗಳು, ಮೋಟಾರು ಕಾರುಗಳು, ದ್ವಿಚಕ್ರ ವಾಹನಗಳು, ವಿಮಾನಗಳು, ರೈಲು ಗಾಡಿಗಳು, ಟ್ರ್ಯಾಕ್ಟರುಗಳು, ವಾಚ್‌ಗಳು, ಕ್ಯಾಮರಾಗಳು, ಹೊಲಿಗೆ ಮೆಶೀನ್‌ಗಳು, ಮದ್ದುಗಳು ಇತ್ಯಾದಿಗಳನ್ನು ಕಂಡು ಹುಡುಕಿದವರು ಅವರ ಹಿಂದೆ ಇದನ್ನು ಸರಿಯಾಗಿ ಮಾಡಲು ದೇವರ ಕೈವಾಡವಿರುವುದನ್ನು ನೋಡುತ್ತೇವೆ. ಸರ್ವಶಕ್ತನನ್ನು ಅರಿಯದವರು ಈ ಲೋಕದಲ್ಲಿ ಕಡಿಮೆ ವಸ್ತುಗಳನ್ನು ಕಂಡು ಹಿಡಿಯುತ್ತಾರೆ. ದೇವರ ಜನರು ಸೃಷ್ಟಿಸಿದ ಫಲಗಳನ್ನು ನಾವು ಸಂತೋಷದಿಂದ ಅನುಭವಿಸುತ್ತಾ ಇದ್ದೇವೆ.

ನಿಮ್ಮ ಮುಖಾಂತರವಾಗಿ ದೇವರು ಈ ವರ್ಷದಲ್ಲಿ ಹೊಸತಾಗಿ ಮಾಡಲು ಆಲೋಚಿಸಿದ್ದಾನೆ. ನಾವು ಗಾಳಿ ಮತ್ತು ಮಳೆ, ಚಂದ್ರ ಸೂರ್ಯನನ್ನು ಸಂತೋಷದಿಂದ ಅನುಭವಿಸುವ ಹಾಗೆ ಅನೇಕ ಉಪಕಾರದ ಯೋಜನೆಗಳನ್ನು ಆಲೋಚಿಸಿಕೊಂಡಿದ್ದಾನೆ. ದೇವರು ಪಕ್ಷಪಾತಿಯ (ಎಫೆಸ್ಸ 16:9) ಅದು ಯೋಜನೆ ನಿಮ್ಮಲ್ಲಿ ಕಾರ್ಯರೂಪಕ್ಕೆ ಬರದಿದ್ದಾಗ ನೀವು ಬಹಳಷ್ಟು ಆಶೀರ್ವದಿಸಲ್ಪಡುವಿರಿ. ಸುವಾರ್ತೆ 2:8ರಲ್ಲಿ ಹೇಳಿದ ಪ್ರಕಾರ ಆತನು ದೀನನನ್ನು ಧೂಳಿಯಿಂದ ಎತ್ತಿ ದರಿದ್ರನನ್ನು ತಿಪ್ಪೆಯಿಂದ ಎಬ್ಬಿಸಿ ಪ್ರಭುಗಳೊಂದಿಗೆ ಕುಳ್ಳಿರಿಸಿ ಅವನಿಗೆ ಮಹಿಮಾಸನವನ್ನು ಬಾಧ್ಯತೆಯಾಗಿ ಅನುಗ್ರಹಿಸುವವನಾಗಿದ್ದಾನೆ. ನೀವು ಜೀವನದಲ್ಲಿ ಎಲ್ಲವನ್ನು ಕಳೆದು

*(2ನೇ ಪುಟಕ್ಕೆ)*

TOUCHING LIVES BY TEACHING...SINCE 1969

# ಯೇಸು ಕ್ರಿಸ್ತನ ಕರೆಯ ಪ್ರತಿಧ್ವನಿ

## ಸುವರ್ಣ ಮಹೋತ್ಸವ - 2019

ಕನ್ನಡ, ಹಿಂದಿ, ಇಂಗ್ಲಿಷ್, ಮರಾಠಿ, ತೆಲುಗು, ಮಲಯಾಳಂ, ತಮಿಳು, ಬೆಂಗಾಳಿ, ಗುಜರಾಥಿ, ಸಿನ್ಹಾಳಿ, ಪಂಜಾಬಿ, ಆಸ್ಸಾಮಿ, ಒರಿಯಾ, ಉರ್ದು, ನೇಪಾಳಿ ಮತ್ತು ಆಫ್ರಿಕಾನ್ ಭಾಷೆಗಳಲ್ಲಿ ಮಾಸಪತ್ರಿಕೆ.






"ಆತನು ನಿಮಗೆ ಸಂತಾನ ಪಶು ವ್ಯವಸಾಯಗಳ ಸಮೃದ್ಧಿಯನ್ನುಂಟು ಮಾಡುವನು" (ಧರ್ಮೋಪದೇಶ 28:11)

**ಯೇಸು ಕ್ರಿಸ್ತನಲ್ಲಿ ಪ್ರಿಯ ಸ್ನೇಹಿತರೇ,**

ನಾವು ನಿಮ್ಮನ್ನು ಯೇಸು ಕ್ರಿಸ್ತನ ಮಧುರ ನಾಮದಲ್ಲಿ ವಂದಿಸುತ್ತೇವೆ. ಆತನ ಸುವಾರ್ತಾ ಸೇವೆಯಲ್ಲಿ ಅನೇಕ ಸಾವಿರಾರು ಜನರು ಜಾತಿ ಭೇದವಿಲ್ಲದೆ ಆಶೀರ್ವಾದಿಸುವುದಕ್ಕಾಗಿ ಸೇವಾ ಸಂಸ್ಥೆಯನ್ನು ದೇವರು ಆಶೀರ್ವಾದಿಸುವುದಕ್ಕಾಗಿ ಉಪಕಾರವನ್ನು ಸಲ್ಲಿಸುತ್ತೇವೆ. ಈ ಮಾಸ ಪತ್ರಿಕೆಯನ್ನು ಓದುವುದಕ್ಕಾಗಿ ನಿಮಗೆ ಚಿರ ಋಣಿಗಳಾಗಿದ್ದೇವೆ. ನೀವು ಇದನ್ನು ಪ್ರೋತ್ಸಾಹಿಸುವುದಕ್ಕಾಗಿ ಸಹಾಯ ಮಾಡುವುದಕ್ಕಾಗಿ ಉಪಕಾರಗಳು.

ನಿಮಗೆ ತಿಳಿದ ಪ್ರಕಾರ ಡಿಸೆಂಬರ್ 2019ರ 1ನೇ ತಾರೀಕಿನಿಂದ 31 ಜನವರಿ 2020ರ ವರೆಗೆ ಬಹಳ ಚಟುವಟಿಕೆಗಳಲ್ಲಿ ಎಡೆಬಿಡದೆ ನಿರತರಾಗಿದ್ದೇವೆ. ನಮ್ಮ ವಿವಿಧ ಭಾಗಗಳಿಂದ ದೇವರ ಸುವಾರ್ತಾ ವಾಕ್ಯಗಳನ್ನು ಕಳುಹಿಸುವುದರಲ್ಲಿ ನಿರತರಾಗಿದ್ದೇವೆ. ಆತನ ಬಹಳ ವಿಶೇಷ ಕಾರ್ಯಗಳಿಂದ ದೇಶ ವಿದೇಶಗಳಿಗೆ ತನ್ನ ವಾಕ್ಯವನ್ನು ಎಣಿಸದ ರೀತಿಯಲ್ಲಿ ಸಹಾಯ ಮಾಡಿದ್ದಾನೆ.

ನಿಮ್ಮ ಕಾಗದಗಳಿಂದ ಎಸ್ಎಮ್ಎಸ್ ಈ ಮೇಲ್ಸ್, ವಾಟ್ಸ್ಅಪ್, ದೂರವಾಣಿ ಸಂದೇಶಗಳು ಮೊದಲಾದವುಗಳನ್ನು ಕಳುಹಿಸುವುದರ ಮೂಲಕ ನಮಗೆ ಪ್ರೋತ್ಸಾಹಿಸುವುದಕ್ಕಾಗಿ ದೇವರು ನಿಮ್ಮನ್ನು ಹೇರಳವಾಗಿ ಆಶೀರ್ವಾದಿಸಲಿ. ಪ್ರಾರ್ಥನಾ ಮನವಿಗಳು ಜನವರಿ 2020ರ **ಕರೆಯ ಪ್ರತಿಧ್ವನಿ** ಮಾಸ ಪತ್ರಿಕೆಗೆ ದೇವರ ದಯದಿಂದ ಸಿಕ್ಕಿವೆ. ನಮ್ಮ ಪ್ರಾರ್ಥನಾ ಪ್ರೋತ್ಸಾಹಕರುಗಳಿಗೆ ಮತ್ತು ಸದಸ್ಯರುಗಳಿಗೆ ಉಪಕಾರಗಳನ್ನು ಸಲ್ಲಿಸುತ್ತೇವೆ.

ಸರಕಾರಿ ಪರೀಕ್ಷೆಗಳಲ್ಲಿ ಸ್ಯೆಂಟ್ ಮೆಟ್ರಿಕ್ಯುಲೇಶನ್ ಶಾಲೆಯ ವಿದ್ಯಾರ್ಥಿಗಳು ಉತ್ತಮ ಮಾರ್ಕುಗಳಲ್ಲಿ ಪಾಸಾಗುತ್ತಾರೆ. ಈ ವರ್ಷ ಕೂಡಾ ಎಪ್ರಿಲ್ 2020ರಲ್ಲಿ ನಡೆಯುವ ಸರಕಾರಿ ಪರೀಕ್ಷೆಗಳಲ್ಲಿ ಉತ್ತಮ ಮಾರ್ಕುಗಳನ್ನು ಪಡೆದುಕೊಳ್ಳುವಂತೆ ದೇವರಲ್ಲಿ ಮನವಿ ಮಾಡಿಕೊಳ್ಳಿರಿ. ನಮ್ಮ ಆಲಯಗಳಿಗೆ, 16 ಭಾಷೆಗಳಲ್ಲಿ ಪ್ರಕಟವಾಗುವ ಮಾಸಿಕ ಪತ್ರಿಕೆಗಳಿಗಾಗಿ, ನೆಹೆಮೀಯ ಬೈಬಲ್ ಕಾಲೇಜುಗಳಿಗೆ, ಗೋಸ್ಪೆಲ್ ಪ್ರಿಂಟಿಂಗ್ ಪ್ರೆಸ್ಸು ಮತ್ತು ಇತರ ಚಟುವಟಿಕೆಗಳಿಗಾಗಿ ದೇವರಲ್ಲಿ ಪ್ರಾರ್ಥಿಸಿರಿ. ನಾವು ನಿಮಗಾಗಿ ದೇವರಲ್ಲಿ ಪ್ರಾರ್ಥಿಸುತ್ತೇವೆ ಮತ್ತು ಪ್ರೀತಿಸುತ್ತೇವೆ.

ದೇವರು ನಿಮ್ಮನ್ನು ಆಶೀರ್ವದಿಸಲಿ.

ಯೇಸು ಕ್ರಿಸ್ತನಲ್ಲಿ ನಿಮ್ಮ ಸೇವಕ

**- ಎಸ್. ಸ್ಯಾಮ್ ಸೆಲ್ವರಾಜ್**

---

*(1ನೇ ಪುಟದಿಂದ)*

ಕೊಂಡಿರಬಹುದು. ಆದರೆ ನಿಮ್ಮ ಭವಿಷ್ಯವನ್ನು ಕಳೆದು ಕೊಳ್ಳಲಿಲ್ಲ. ಕ್ರಿಸ್ತ ಯೇಸು ನಿಮಗಾಗಿ ಇಟ್ಟ ಆಶೀರ್ವಾದಗಳನ್ನು ಪಡೆದುಕೊಳ್ಳಲು ತಯಾರಾಗಿರ್ರಿ.

50 ವರ್ಷಗಳ ಮೊದಲು ನನ್ನ ಸ್ಥಿತಿ ಕೂಡಾ ಇದೇ ರೀತಿಯಲ್ಲಿ ಇತ್ತು. ಕೆಲವು ಮಂದಿ ನಮ್ಮ ಸಂಬಂಧಿಕರು ಕುಡಿತಕ್ಕೆ ಅಮಲು ಪದಾರ್ಥದ ವ್ಯಸನಿಗಳಾಗಿದ್ದರು. ಸಿನೇಮಾಕ್ಕೆ ಮರುಳಾದವರು, ಶರೀರಾದಾಶೆಗೆ ಒಳಪಟ್ಟವರು, ಮೂರ್ತಿ ಪೂಜೆ ಮಾಡುವವರು, ಸುಳ್ಳುಗಾರರು, ಬೇರೆಯವರಿಗೆ ತೊಂದರೆ ಕೊಡುವವರು, ಕಳ್ಳತನ ಮಾಡುವವರು, ಹಣದಾಶೆಯುಳ್ಳವರು, ದೇವರ ಮಾತನ್ನು ಉಲ್ಲಂಘಿಸಿದವರು, ಇಂಥವರೊಂದಿಗೆ ನಾನು ಕೂಡಾ

**CHIEF EDITORS**
Pastor S. Sam Selva Raj
Angeline Selvakumari Henry, M.A., M.Ed.
**MANAGING EDITOR**
Pastor Alex Samson Sam, B.Th., M.Div.
**ADMINISTRATION**
Bro. N. Prakasam, M.A., General Manager
**EDITORIAL BOARD**
Sis. Jesy Veena Sam
Bro. M. Paulraj, M.A., B.Ed.
Sis. Serena Bevin, M.A., M. Phil., B.Ed.
**ADVISORY BOARD**
Adv. Jose Abraham
Adv. N. Balaji, B.Com., B.L.
Dr. S. Rabinder Boaz, M.S.
Er. C.G.S. Baburao, B.Tech., M.Tech. (DM)
Aud. K. Puratchivendan, M.Com., B.L.
Bro. Rajeswaran Samuel, B.Com.

**PUBLISHER & PRINTER**
Pastor S. SAM SELVA RAJ
**Echo of His Call Printers**
10, Mohammed Abdullah 2nd Street,
Chepauk, Chennai- 600 005, India.
**Phone :** (+91-44) 2852 8282
2852 9293, 2854 7766
**Email :** sam@echoofhiscall.org
biblecor@yahoo.co.in
**Websites :**
www.echoofhiscall.org
www.echoofhiscall.com

**Our Ministries:** ✹ ECHO OF HIS CALL Monthly Magazines (16 languages) ✹ BIBLECOR - Postal Courses (3 languages) ✹ Theological Correspondence Courses (2 languages) ✹ Church Planting ✹ Nehemiah Bible Colleges ✹ Gospel Printing Press ✹ Great Commission Partners ✹ Village English High School ✹ Crusades ✹ 100 Prayer Warriors ✹ Community Development

ಇದ್ದೆನು. ತಪ್ಪುಗಳನ್ನು ಮಾಡದ ಹಾಗೆ ನಮ್ಮ ರಕ್ಷಕನಾದ ಯೇಸು ಕ್ರಿಸ್ತನು ನನ್ನನ್ನು ತಪ್ಪಿಸಿದನು. ಈ ಸಂದರ್ಭದಲ್ಲಿ ನಾನು ಬೇರೇನೂ ಮಾಡದೆ ಪ್ರತಿಜ್ಞೆ ಒಂದನ್ನು ತೆಗೆದುಕೊಂಡೆನು.

ನಾನು ಗೊಂದಲದ ಪರಿಸ್ಥಿತಿಯಲ್ಲಿರುವಾಗ ನನ್ನ ಸಂಗಡ ಓದಿಕೊಂಡಿದ್ದ ಸಹೋದರ ಜಯಂತ್ ಪೌಲ್‌ಮೋನಿ ನನ್ನ ಕೈಯಲ್ಲಿ ಒಂದು ಸುವಾರ್ತಾ ಪ್ರತಿಯನ್ನು ಕೊಟ್ಟು ಓದಲು ಹೇಳಿದನು. ಚೆನ್ನೈಯಲ್ಲಿ ವಾಸ ಮಾಡುತ್ತಿದ್ದ ಸಹೋದರ ಸಾಮುವೇಲ್ ದಾನಿಯೇಲ್ ಪಬ್ಲಿಷ್ ಮಾಡಿದ ಕರಡು ಪ್ರತಿಯಾಗಿತ್ತು. ಎರಡು ನಿಮಿಷದಲ್ಲಿ ಅದನ್ನು ಓದಿ ಮುಗಿಸಿದೆನು. ಅದರಲ್ಲಿ ಯೇಸು ಕ್ರಿಸ್ತನು ನಿನ್ನನ್ನು ಪ್ರೀತಿಸುತ್ತಾನೆ ಎನ್ನುವ ಸಾರಾಂಶವಾಗಿತ್ತು. ನಾನು ಅದನ್ನೇ ಪದೇ ಪದೇ ಓದುತ್ತಿದ್ದೆನು.

ಯೇಸು ಕ್ರಿಸ್ತನು ಯಾವುದು ಸರಿ ಯಾವುದು ತಪ್ಪು ಎಂದು ಕಲಿಸಿಕೊಟ್ಟದ್ದನ್ನು ನಾನು ಸರಿಯಾಗಿ ತಿಳಿದುಕೊಂಡೆನು. ನಾನು ಒಳ್ಳೆಯದರ ಕುರಿತು ಹೆಚ್ಚು ತಿಳಿದುಕೊಳ್ಳಲು ಪ್ರಯತ್ನಿಸಿದೆನು. ದೇವರು ನನಗೆ ಇದನ್ನು ಕೀರ್ತನೆ 4:3 ರಲ್ಲಿ ತೋರಿಸಿ ಕೊಟ್ಟನು. ಯೆಹೋವನು ತನ್ನ ಭಕ್ತನನ್ನು ತನಗೋಸ್ಕರ ಪ್ರತ್ಯೇಕಿಸಿಕೊಂಡಿದ್ದಾನೆಂದು ತಿಳಿದು ಕೊಳ್ಳಿರಿ. ನಾನು ಆತನಿಗೆ ಮೊರೆಯಿಡುವಾಗೆಲ್ಲಾ ಆತನು ಕೇಳುತ್ತಾನೆ. ಹಿಂದು ಮುಂದೆ ನೋಡದೆ ನಾನು ನನ್ನನ್ನು ಆತನಿಗೆ ಸಮರ್ಪಿಸಿಕೊಂಡೆನು. ನಾನು ನನ್ನ ಹೃದಯದ ಅಂತರಾಳದಿಂದ ಸಂತೋಷಗೊಂಡೆನು.

“ನನ್ನ ನಲ್ಲನು ಬಿಳುಪು ಕೆಂಪು ಬಣ್ಣವುಳ್ಳವನು. ಅವನು ಹತ್ತು ಸಾವಿರ ಜನರಲ್ಲಿ ಧ್ವಜ ಪ್ರಾಯನು. ಅವನ ತಲೆಯು ಚೊಕ್ಕ ಬಂಗಾರ ದಂತಿದೆ. ಗುಂಗುರು ಗುಂಗುರಾಗಿರುವ ಅವನ ಕೂದಲು ಕಾಗೆಯಂತೆ ಕಪ್ಪಾಗಿದೆ. ಅವನ ಕಣ್ಣುಗಳೋ ತುಂಬಿ ತುಳುಕುವ ತೊರೆಗಳ ಹತ್ತಿರ ತಂಗುತ್ತಲೂ ಕ್ಷೀರದಲ್ಲಿ ಸ್ನಾನ ಮಾಡುತ್ತಲೂ ಇರುವ ಪಾರಿವಾಳಗಳಂತಿವೆ. ಅವನ ಕೆನ್ನೆಗಳು ಕರ್ಣಕುಂಡಲ ಗಿಡಗಳ ಪಾತಿಗಳಂತೆಯೂ ಸುಗಂಧ ಸಸ್ಯಗಳು ಬೆಳೆಯುವ ದಿಬ್ಬಗಳಂತೆಯೂ ಇವೆ. ಅಚ್ಚ ರಕ್ತಬೋಳವನ್ನು ಸುರಿಸುವ ಅವನ ತುಟಿಗಳು ಕೆಂದಾವರೆಗಳೇ. ಅವನ ಕೈಗಳು ಪೀತ ರತ್ನ ಖಚಿತವಾದ ಬಂಗಾರದ ಸಲಾಕೆಗಳೋ ಪಾದಿಯಲ್ಲಿವೆ. ಅವನ ಮೈ ಇಂದ್ರ ನೀಲಮಯವಾದ ದಂತ ಫಲಕದ ಹಾಗಿದೆ. ಅವನ ಕಾಲುಗಳು ಅಪರಂಜಿಯ ಸುಣ್ಣ ಪಾದಗಳ ಮೇಲಿಟ್ಟ ಚಂದ್ರಕಾಂತ ಸ್ತಂಭಗಳು ದೇವದಾರುಗಳಷ್ಟು ರಮಣೀಯವಾದ ಅವನ ಗಾಂಭೀರ್ಯವು ಲೆಬನೋನಿಗೆ ಸಮಾನ. ಅವನ ನುಡಿ ಬಹು ಇಂಪು ಹೌದು. ಅವನು ಸರ್ವಾಂಗದಲ್ಲಿಯೂ ಮನೋಹರನು. ಯೆರೋಸಲೇಮಿನ ಸ್ತ್ರೀಯರುಗಳಿರಾ, ಇವನೇ ಎನ್ನಿನಿಯನು ಇವನೇ ನನ್ನ ಪ್ರಿಯನು. (ಪರಮಗೀತ 5:10-16)”

ನಾನು ಯೇಸುವಿನಲ್ಲಿ ಆತನನ್ನು ಕಂಡುಕೊಂಡ ಬಳಿಕ ಹೊಸದಾದ ಪವಿತ್ರ ಗೆಳೆಯನನ್ನು ಕಂಡುಕೊಂಡೆನು. ಈ ವಿಷಯವನ್ನು ನನ್ನ ಜೀವನದಲ್ಲಿ ಅಳವಡಿಸಿಕೊಂಡಾಗ ದೊಡ್ಡ ಬದಲಾವಣೆ ಜೀವನದಲ್ಲಾಯಿತು.

ನಾನು ಮಾತಾಡುವುದರಲ್ಲಿ ನಿಧಾನ ಹಾಗೆಯೇ ಕಲಿಯುವುದರಲ್ಲಿ ಕೂಡಾ ಹಿಂದೆ ಇದ್ದೆನು. ನನ್ನ ಹತ್ತಿರ ಯಾವ ರಾಜಕೀಯ, ಹಣ ಸಹಾಯ ಅಥವಾ ಜನಬಲ ನನ್ನ ಹತ್ತಿರ ಇರಲಿಲ್ಲ. ಯೇಸು ಕ್ರಿಸ್ತನು ನನ್ನನ್ನು ಮೇಲಕ್ಕೆ ಎಬ್ಬಿಸಿದ ನಂತರ ನನಗೆ ಈಗ ಯಾವುದರ ಅಗತ್ಯ ಕೂಡಾ ಇಲ್ಲ. ಅದೇ ದೇವರು ನಿಮ್ಮನ್ನು ಕೂಡಾ ಮೇಲೆಕ್ಕೆತ್ತುವನು. ಅವನ ಹತ್ತಿರ ಬನ್ನಿರಿ ಜೀವನದಲ್ಲಿ ನೀವು ಮೇಲಕ್ಕೆ ಎತ್ತಲ್ಪಡುವಿರಿ.

ದೀನತೆಯನ್ನು ನಮಗೆ ಕೊಟ್ಟದ್ದು ದೇವರ ದೊಡ್ಡದಾದ ವರವಾಗಿದೆ. ಇದನ್ನು ನೀವು ಆರಿಸಿಕೊಂಡರೆ ಜೀವನದಲ್ಲಿ ನೀವು ಉನ್ನತ ಪದವಿಗೆ ಬರುವಿರಿ. ಇದರಿಂದ ನೀವು ಪರಲೋಕದ ಐಶ್ವರ್ಯವನ್ನು ಅನುಭವಿಸುವಿರಿ. ದೇವರಿಗೆ ಬೇಕಾದದ್ದನ್ನೇ ಆರಿಸಿಕೊಳ್ಳುವುದರಲ್ಲಿ ನೀವು ಸಫಲರಾಗುವಿರಿ.

ನಿಮ್ಮ ಕಳೆದು ಹೋದ ಜೀವನ ಕಹಿಯಾಗಿರಬಹುದು. ಆದರೆ ಭವಿಷ್ಯದ ಕುರಿತಾಗಿ ಭಯ ಪಡುವುದು ಬೇಡ. ನಿಮಗಾಗಿ ಒಂದು ಹೊಸ ಸುದ್ದಿ ಕಾದಿದೆ. ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳುವಿರೋ? ನಿಮಗೆ ಶಾಂತಿಯಿಂದ ತುಂಬಿದ ಭವಿಷ್ಯ ಬೇಕೋ? ಅದು ನಿಮ್ಮ ಕೈಯಲ್ಲಿ ಇದೆ. ದೇವರು ನಿಮ್ಮ ಹತ್ತಿರ ಅನೇಕ ಸಲ ಮಾತಾಡಿದ್ದಾನೆ. ಆತನಿಗೆ ವಿಧೇಯರಾಗುತ್ತೇವೆ ಎನ್ನುವ ಒಂದೇ ಮಾತಿನ ಮೇಲೆ ಈ ದಿನ ನಿರ್ಧಾರ ತೆಗೆದುಕೊಳ್ಳಿರಿ. ಅದನ್ನು ಯೋಚಿಸುವುದು ನಿಮ್ಮ ಕೆಲಸವಾಗಿದೆ. ಸಮುದ್ರದ ಆಚೆ ಕಡೆಯಿಂದ ಇದರ ವಿಷಯದಲ್ಲಿ ಸಹಾಯ ಮಾಡಲು ಜನರ ಅಗತ್ಯವಿಲ್ಲ. ಪರಲೋಕದಷ್ಟು ದೂರವಾಗಿಲ್ಲ. ಹೃದಯದಲ್ಲಿ ದೇವರನ್ನು ನಂಬುವ ಕೆಲಸವನ್ನು ಮಾಡಬೇಕು. ಅದನ್ನು ಬಾಯಿಂದ ಅರಿಕೆ ಮಾಡಿರಿ. ನೀವು ಹೃದಯದಲ್ಲಿ ಇಟ್ಟ ನಂಬಿಕೆಯ ಮೇಲೆ ನಿಮ್ಮ ಬಾಯಿಂದ ಅರಿಕೆ ಮಾಡುವುದರ ಮೂಲಕ ನಿಮ್ಮ ಭವಿಷ್ಯ ನಿರ್ಧರಿಸಲ್ಪಟ್ಟಿದೆ.

ಈ ಆಜ್ಞೆಯ ಮೇರೆಗೆ ನಾನು ಆಜ್ಞಾಪಿಸುವುದೇನೆಂದರೆ - ಇದು ನಿಮಗೇನೂ ಅಪರಿಚಿತವಾದದ್ದಲ್ಲ. ಇದು ನಿಮ್ಮಿಂದ ದೂರವಾದದ್ದೂ ಅಲ್ಲ. ಧರ್ಮೋಪದೇಶ ಕಾಂಡ 30:11-14 ರಲ್ಲಿ ತಿಳಿಸಿದ ಪ್ರಕಾರ “ನಾನು ಈಗ ನಿಮಗೆ ಬೋಧಿಸಿದ ಧರ್ಮೋಪದೇಶ ನಿಮಗೆ ಗ್ರಹಿಸುವುದಕ್ಕೆ ಕಷ್ಟವಾದದ್ದೂ ಅಲ್ಲ. ಹೊಂದುವುದಕ್ಕೆ ಅಸಾಧ್ಯವಾದದ್ದೂ ಅಲ್ಲ. ಇದು ಮೇಲಣ ಲೋಕದಲ್ಲಿರುವ ಮಾತಲ್ಲ. ನಮಗೋಸ್ಕರ ಮೇಲಣ ಲೋಕವನ್ನು ಏರಿ ಅದನ್ನು ತಿಳಿದುಕೊಂಡು ಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೇಳಿ ಕೈಕೊಂಡೇವು. ಅಂದುಕೊಳ್ಳುವುದಕ್ಕೆ ಅವಕಾಶವೇನೂ ಇಲ್ಲ ಮತ್ತು ಇದು ಸಮುದ್ರದ ಆಚೆ ಇರುವ ಮಾತಲ್ಲ. ನಮಗೋಸ್ಕರ ಸಮುದ್ರವನ್ನು ದಾಟಿ ಅದನ್ನು ತೆಗೆದುಕೊಂಡು ಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೈಕೊಂಡೇವು ಅಂದುಕೊಳ್ಳುವುದಕ್ಕೆ ಆಸ್ಪದವೇನೂ ಇಲ್ಲ. ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ. ಇದು ನಿಮ್ಮ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ. ಇದನ್ನು ಅನುಸರಿಸುವುದಕ್ಕೆ ಅವಕಾಶವುಂಟಷ್ಟೇ”.

ಧರ್ಮೋಪದೇಶದ ಕಾಂಡ 30:20 ರಲ್ಲಿ ದೇವರು ಜೀವನದ ಗುಪ್ತ ವಿಷಯಗಳನ್ನೂ, ಜಯಶೀಲವಾದ ದೀರ್ಘವಾದ ಜೀವನದ ಕುರಿತು ತಿಳಿಸಿದ್ದಾನೆ. ಬಹಳ ಸುಲಭವಾಗಿ ತಿಳಿಯುವಂತೆ ವಿವರಿಸಿದ್ದಾನೆ. ಇದು ನಿಮಗೆ ಶುಭವನ್ನು ತರುವುದು. ನಿಮ್ಮ ದೇವರಾದ ಯೆಹೋವನನ್ನು ಪ್ರೀತಿಸಿ ಆತನ ಮಾತಿಗೆ ವಿಧೇಯರಾಗಿರಿ. ಆತನನ್ನು ಹೊಂದಿಕೊಂಡೇ ಇರ್ರಿ. ಯೆಹೋವನು ನಿಮ್ಮ ಪಿತೃಗಳಿಗೆ ಪ್ರಮಾಣ ಮಾಡಿಕೊಟ್ಟ ದೇಶದಲ್ಲಿ ನೀವು ಬದುಕಿಕೊಳ್ಳುವುದಕ್ಕೂ ಬಹುಕಾಲ ಇರುವುದಕ್ಕೂ ಆತನೇ ಆಧಾರ.

## 1. ನಿಮ್ಮ ದೇವರನ್ನು ಪ್ರೀತಿಸಿರಿ

ಈ ಜಗತ್ತಿನಲ್ಲಿ ಪ್ರೀತಿಯನ್ನು ತಪ್ಪಾದ ಜಾಗದಲ್ಲಿ ಕೆಲವು ಜನರು ಉಪಯೋಗಿಸಿದ್ದಾರೆ. ಶರೀರದಾಶೆ, ಕಣ್ಣಿನಾಶೆ ಲೋಕದ ಡಂಭದ ಮೇಲೆ ವಿನಿಯೋಗಿಸಲ್ಪಟ್ಟಿದೆ. ತಂದೆಗಳೇ ಆದಿಯಿಂದಿರು ವಾತನನ್ನು ನೀವು ಬಲ್ಲವರಾಗಿರುವುದರಿಂದ ನಿಮಗೆ ಬರೆದಿದ್ದೇನೆ. ಯೌವನಸ್ಥರೇ, ನೀವು ಶಕ್ತರಾಗಿರುವುದರಿಂದಲೂ ದೇವರ ವಾಕ್ಯವು ನಿಮ್ಮಲ್ಲಿ ನೆಲೆಗೊಂಡಿರುವುದರಿಂದಲೂ ನೀವು ಕೆಡುಕನ್ನು ಜಯಿಸಿರುವುದರಿಂದಲೂ ನಿಮಗೆ ಬರೆದಿದ್ದೇನೆ. ಲೋಕವನ್ನಾಗಲಿ, ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ, ಕಣ್ಣಿನಾಶೆ ಬದುಕು ಬಾಳಿನ ಡಂಭ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ. ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ. ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು.

ಲೋಕದ ಸುದ್ದಿಗೆ ಜಾಗ್ರತೆಯುಳ್ಳವರಾಗಿರಿ. ಪ್ರತಿಯೊಂದು ಕಡೆಯಿಂದಲೂ ಕೊಲೆ, ಕಳ್ಳತನ, ಶೀಲಹರಣ, ಆರ್ಥಿಕ ದ್ರೋಹಗಳು ಸಾಮಾನ್ಯ ಮನುಷ್ಯನ ಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆ. ಇದಕ್ಕೆಲ್ಲಾ ಮುಖ್ಯ ಕಾರಣವೇನೆಂದರೆ ತಮ್ಮ ಪ್ರೀತಿಯ ಬೀಜವನ್ನು ತಪ್ಪಾದ ಸ್ಥಳದಲ್ಲಿ ಬಿತ್ತಿದ್ದಾರೆ. ಅವರು ದೇವರ ವಿಷಯದಲ್ಲಿ ಚಿಂತಿಸುವುದಿಲ್ಲ. ಸೃಷ್ಟಿಕರ್ತನ ವಿಷಯದಲ್ಲಿ ಚಿಂತಿಸದೆ, ಆತನ ಸೃಷ್ಟಿ ಕಾರ್ಯಗಳ ವಿಷಯದಲ್ಲಿ ಚಿಂತಿಸುತ್ತಾರೆ. ಅದರ ಮೇಲೆ ನಂಬಿಕೆಯಿಡು ತ್ತಾರೆ. ಪ್ರಸಂಗಿ 12:1ರಲ್ಲಿ ಹೀಗೆ ಬರೆದಿದೆ- ಕಷ್ಟದ ದಿನಗಳೂ ಸಂತೋಷವಿಲ್ಲವೆಂದು ನೀನು ಹೇಳುವ ವರುಷಗಳೂ ಸಮೀಪಿಸುವುದರೊಳ ಗಾಗಿ ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು. ಅನೇಕರು ತಮ್ಮನ್ನು ರಾಜಕೀಯ ನಾಯಕರುಗಳ ಹಿಂದೆ ಹಾಕುತ್ತಾರೆ. ಅವರು ಬೇಡವಾದ ಕೆಲಸಗಳಲ್ಲಿ ನಡೆಸುವುದರಲ್ಲಿ ನಿರತರಾಗಿದ್ದಾರೆ. ಅವರು ತಮ್ಮ ಸೃಷ್ಟಿಕರ್ತನನ್ನು ಮರೆತು ಬಿಟ್ಟಿದ್ದಾರೆ. ಯೇಸು ಕ್ರಿಸ್ತನು ಮತ್ತಾಯ 6:33ರಲ್ಲಿ ಹೀಗೆ ಹೇಳಿದ್ದಾನೆ- ಹೀಗಿರುವುದರಿಂದ ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡಿರಿ. ಇವುಗಳ ಕೂಡಾ ಅವೆಲ್ಲವೂ ನಿಮಗೆ ದೊರಕುವವು. ಸ್ವಲ್ಪ ಮಂದಿ ಮಾತ್ರ ಈ ವಾಕ್ಯಕ್ಕೆ ಕಿವಿಗೊಟ್ಟು ಅದರ ಪ್ರಕಾರ ನಡೆಯುತ್ತಾರೆ.

ಮೊತ್ತ ಮೊದಲಾಗಿ ನೀವು ನಿಮ್ಮ ಜೀವನ ದಲ್ಲಿ ಪ್ರಥಮ ಆದ್ಯತೆಯನ್ನು ದೇವರಿಗೆ ಕೊಡಿರಿ. ಹೀಗೆ ಮಾಡುವುದರಿಂದ ನೀವು ಅನೇಕ ಅದ್ಭುತ ಚಮತ್ಕಾರಗಳನ್ನು ಜೀವನದಲ್ಲಿ ಕಾಣುವಿರಿ.

ನಿಮ್ಮ ಮುಂದೆ ಮಾತಾಡುವ ನಾನು ನನ್ನ ಜೀವನದಲ್ಲಿ ಇದನ್ನು ನಾನು ಅನುಭವಿಸಿದ್ದೇನೆ. ಇದನ್ನು ನಿಮ್ಮ ಮಧ್ಯೆ ನನ್ನ ಆಸ್ತಿ, ಸಮಯ, ವಿದ್ಯೆ, ಆರೋಗ್ಯ ಇತ್ಯಾದಿ ಕುರಿತಾಗಿ ವಿಮರ್ಶೆ ಮಾಡುವಾಗ ವಿವರವಾಗಿ ತಿಳಿದು ಬರುತ್ತದೆ. ನಾನು ಮೊದಲ ಪ್ರಾಶಸ್ತ್ಯವನ್ನು ದೇವರಿಗೆ ಕೊಡು ತ್ತೇನೆ. ಆದ ಕಾರಣ ನನ್ನ ಮುಖಾಂತರವಾಗಿ ಅನೇಕ ಮಂದಿಗೆ ಆಶೀರ್ವಾದಗಳನ್ನು ಕೊಡುತ್ತಿ ದ್ದಾನೆ. ನೀವು ಕೂಡಾ ಮುಂದೆ ಬನ್ನಿರಿ. ನಿಮ್ಮಲ್ಲಿ ಇದ್ದದ್ದನ್ನು ಎಂದಿಗೂ ದೇವರು ತೆಗೆದು ಹಾಕುವು ದಿಲ್ಲ. ನಿಮ್ಮ ಕುಟುಂಬ ಪಾರಂಪರ್ಯವಾಗಿ ಒಳ್ಳೆಯದನ್ನೇ ಕೊಡಲು ಆತನು ಬಯಸುತ್ತಾನೆ.


ಅಂಚೆ ಪಾಠಗಳು

## 1. ಬೈಬಲ್ ಕೋರ್

BIBLECOR

ಸತ್ಯವೇದದ ಆಧಾರಭೂತ ಸತ್ಯಾಂಶಗಳನ್ನು ಕಲಿಸಿ ಕೊಡುವ ನಿಮಿತ್ತ ಅಂಚೆ ಮೂಲಕ ಹಿಂದಿ, ತಮಿಳು ಹಾಗೂ ಆಂಗ್ಲ ಭಾಷೆಯಲ್ಲಿ ಕ್ರಮವಾಗಿ ಪಾಠಗಳನ್ನು ಕಲಿತವರಿಗೆ **ನಿಮಗಾಗಿ – ಹೊಸ ಜೀವನ!** 70 ಪುಟಗಳೊಂದಿಗೆ ಎಂಬ ಪುಸ್ತಕವನ್ನು ಕಳುಹಿಸಿಕೊಡಲಾಗುವುದು. ಈ ಪಾಠಗಳನ್ನು ಕ್ರಮವಾಗಿ ವ್ಯಾಸಂಗ ಮಾಡಿದ ನಂತರ ಪ್ರಮಾಣ ಪತ್ರವನ್ನು ನೀಡಲಾಗುವುದು. ಇದಕ್ಕೆ ಯಾವುದೇ ನಿಗದಿತ ಶುಲ್ಕವಿಲ್ಲ.

## 2. ಅಂಚೆಯ ಮೂಲಕ ಸತ್ಯವೇದಭ್ಯಾಸಗಳು

THEOLOGICAL CORRESPONDENCE COURSE

ಪಾಸ್ಟರ್ಸ್ ಮತ್ತು ಕ್ರಿಸ್ತೀಯನ್ ನಾಯಕರಿಗಾಗಿ ಅಂಚೆಯ ಮೂಲಕ ವೇದಾಂತ ವಿದ್ಯಾಭ್ಯಾಸ ಕೋರ್ಸ್ ಲಭ್ಯವಿದೆ. ಈ ಕೋರ್ಸಿನ ಶುಲ್ಕ ರೂ. 100 ಮಾತ್ರ. 142 ಅಧ್ಯಾಯಗಳನ್ನು ಒಳಗೊಂಡಿರುವ 7 ಪುಸ್ತಕಗಳನ್ನು ನಿಮಗೆ ನೀಡಲಾಗುವುದು. ನಿಮಗೆ **Certificate in Ministry** ಎಂಬ ಪ್ರಮಾಣ ಪತ್ರ ಸಿಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಇಂದೇ ಬರೆಯಿರಿ

**The Chairman, Nehamiah Bible College, Echo of His Call**
10, Mohammed Abdullah 2nd Street, Opp. Cricket Stadium,
Chepauk,Chennai - 600 005, India
**Ph. : (044) 2852 8282, 2852 9293, 2854 7766, Cell : (+91) 98410 71852, 90924 62566**
**E-mail : biblecor@yahoo.co.in.**


ಜನರು ತಮ್ಮ ಪ್ರೀತಿಯನ್ನು ಶರೀರದಾಶೆಗೆ ವಿನಿಯೋಗಿಸುತ್ತಾರೋ ನಾಶವಾಗಿ ಹೋಗು ವಂಥ ವಿಷಯಗಳ ಮೇಲೆ ಹಾಕುವಾಗ ದೇವರ ಮೇಲೆ ಪ್ರೀತಿ ಹಾಕುವಾಗ ಅದರ ಪರಿಣಾಮ ವನ್ನು ಕಾಣಬಹುದು. ಯೇಸು ಕ್ರಿಸ್ತನ ಹಾಗೆ ಈ ಲೋಕದಲ್ಲಿ ಬೇರೆ ಯಾವ ಸ್ನೇಹಿತರಾಗಲಿ ಪ್ರೀತಿ ಮಾಡುವವರಾಗಲಿ ಇಲ್ಲ.

ಹೆಚ್ಚಿನ ಸಂಖ್ಯೆಯಲ್ಲಿ ಜನರು ಹಣದಾಶೆಯ ಮತ್ತು ಕಣ್ಣಿನಾಶೆಯ ಮೇಲೆ ಬಿದ್ದು ಪಾಪ ಮಾಡಿ ಅದರಿಂದ ಮೇಲೆ ಬರಲು ಆಗುವುದಿಲ್ಲ. ಆ ಪಾಪದಲ್ಲಿ ಇನ್ನೂ ಮುಂದುವರಿದು ದೂರ ದರ್ಶನ, ಇಂಟರ್‌ನೆಟ್ ಮತ್ತು ಮೊಬೈಲ್‌ಗಳ ಮನೋರಂಜನೆಯ ಮೂಲಕ ಸಮಯ ಕಳೆಯುತ್ತಾರೆ. ಕೆಲವು ಜನರು ಕೆಲವು ಸಿನೆಮಾದ ನಾಯಕರುಗಳನ್ನು ಹೀರೋಗಳನ್ನಾಗಿ ಮಾಡಿ ಅವರನ್ನು ಅನುಸರಿಸಲು ಹೋಗುತ್ತಾರೆ. ಇದನ್ನು ಪಡೆಯುವುದಕ್ಕೋಸ್ಕರ ಅನೇಕ ತಪ್ಪುಗಳನ್ನು ಮಾಡಿ ಜೈಲು ಮತ್ತು ಆಸ್ಪತ್ರೆಗಳನ್ನು ಸೇರುತ್ತಾರೆ. ವಾಸಿಯಾಗದ ಕಾಯಿಲೆಗಳಿಗೆ ತುತ್ತಾಗುತ್ತಾರೆ.

ನನ್ನ ಪ್ರಿಯರೇ, ಇಂದು ನಿಮ್ಮ ಪ್ರೀತಿಯನ್ನು ಯಾರಲ್ಲಿ ಅಳವಡಿಸಿಕೊಂಡಿದ್ದೀರಿ? ಅದನ್ನು ಸರಿಯಾದ ಸ್ಥಳದಲ್ಲಿ ಹಾಕಿದ್ದೀರೋ? ಅದರ ಅಂತ್ಯವನ್ನು ಕಂಡುಕೊಂಡಿದ್ದೀರೋ? ನೀವು ಮಾಡುವ ಕೆಲಸವನ್ನು ದೇವರು ಗದರಿಸುವು ದಾದರೆ ಅದರಿಂದ ಹೊರಬಂದು ದೇವರ ಮುಖ ವನ್ನು ಕಾಣಿರಿ.

ಜೀವನದ ಡಂಭಚಾರ ಬಹಳ ಅಪಾಯ ವಾಗಿದೆ. ಯಾಕೋಬ 4:6ರಲ್ಲಿ ಆತನು ನಮ್ಮ ಮೇಲೆ ಅತಿಶಯವಾದ ಕೃಪೆಯನ್ನು ಇಡುತ್ತಾನೆ. ಆದುದರಿಂದ ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ಕೆಲವರು ಬಡವರಾದರೋ ತಾವು ಶ್ರೀಮಂತರೆಂದು ಕೊಚ್ಚಿಕೊಳ್ಳುತ್ತಾರೆ. ಬೇರೆಯವರು ಅವರ ವಿಷಯದಲ್ಲಿ ಸತ್ಯವನ್ನು ಹೇಳುವಾಗ ನಾಚಿಕೊಳ್ಳುತ್ತಾರೆ. ದೇವರು ದೀನರಿ ಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. (ಯಾಕೋಬ 4:6) ಹಾಗಾಗಿ 1 ಯೋಹಾನ 2:15ರ ಪ್ರಕಾರ ಲೋಕವನ್ನಾಗಲಿ ಲೋಕ ದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ.

*(6ನೇ ಪುಟಕ್ಕೆ)*

**The details of our Bank Accounts are given below. Please inform us the details of your remittances.**

| Bank | Branch | Name | IFSC Code No. | Account Number |
|---|---|---|---|---|
| 1. STATE BANK OF INDIA | Triplicane, Chennai -5 | S. Sam Selva Raj | SBIN 0000249 | 102329 34679 |
| 2. ICICI BANK | Anna Salai, Chennai -2 | Echo of His Call | ICIC 0006038 | 6038 05022319 |

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

## ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13) ತ್ವರಿತಗೊಳಿಸುವುದು (II ತಿಮೋಥಿ. 1:6)

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

## 19 ಫೆಬ್ರವರಿ 2020 ರಿಂದ 18 ಮಾರ್ಚ್ 2020 ರ ವರೆಗೆ

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

### ದೇವರು ಕಾರ್ಯನಿರತನಾಗಿದ್ದಾನೆ! ಸ್ತುತಿಗೆ ಅರ್ಹವಾದ ವಿಷಯಗಳು

| | |
|---|---|
| ಫೆಬ್ರವರಿ 19 | ದೇವರ ಸೇವೆಗಾಗಿ ನಿರತವಾದ ನಿಷ್ಠೆಯುಳ್ಳ ಸೇವೆಯನ್ನು ಮಾಡುವುದಕ್ಕಾಗಿ ನಮ್ಮನ್ನು ನಾವೇ ದೇವರಿಗೆ ಸಮರ್ಪಿಸಿಕೊಂಡಿರುವುದಕ್ಕೆ ದೇವರನ್ನು ಸ್ತುತಿಸಿರಿ. |
| ಫೆಬ್ರವರಿ 20 | **ಕರೆಯ ಪ್ರತಿಧ್ವನಿ ಸಂಸ್ಥೆಯನ್ನು** ಪ್ರೋತ್ಸಾಹಿಸುವವರಿಗಾಗಿ ದೇವರನ್ನು ಆರಾಧಿಸಿರಿ. |
| ಫೆಬ್ರವರಿ 21 | ಟೆಕ್ನಿಕಲ್ ಸ್ಟಾಫ್ ಮತ್ತು ಅವರ ಕುಟುಂಬಕ್ಕಾಗಿ ದೇವರನ್ನು ನಮಿಸಿರಿ. |
| ಫೆಬ್ರವರಿ 22 | ನಮ್ಮ ಪ್ರಮುಖ ಆಲಯದಲ್ಲಿ ಭಾನುವಾರ 5 ಭಾಷೆಗಳಲ್ಲಿ 7 ಆರಾಧನೆಗಳು ಎಡೆಬಿಡದೆ ನಡೆಯುವುದಕ್ಕಾಗಿ ದೇವರನ್ನು ವಂದಿಸಿರಿ. |
| ಫೆಬ್ರವರಿ 23 | ಪ್ರಮುಖ ಮತ್ತು ಶಾಖಾ ಆಲಯಗಳನ್ನು ವಿಶೇಷ ರೀತಿಯಲ್ಲಿ ಆಶೀರ್ವದಿಸುವುದಕ್ಕಾಗಿ ಸಹಾಯ ಮಾಡಿದ ದೇವರಿಗೆ ಜಯ ಘೋಷ ಮಾಡಿರಿ. |
| ಫೆಬ್ರವರಿ 24 | **ಸೈಂಟ್ ಪೌಲ್ಸ್ ಮೆಟ್ರಿಕ್ಯೂಲೇಶನ್ ಶಾಲೆಯ** ಪ್ರಾಂಶುಪಾಲರು, ಶಿಕ್ಷಕ, ಶಿಕ್ಷಕಿ, ಸಿಬ್ಬಂದಿಗಳಿಗಾಗಿ ದೇವರನ್ನು ಕೊಂಡಾಡಿರಿ. |
| ಫೆಬ್ರವರಿ 25 | ನಮ್ಮ ಪ್ರಿಟಿಂಗ್ ಪ್ರೆಸ್ಸು 16 ಭಾಷೆಗಳಲ್ಲಿ ಮಾಸ ಪತ್ರಿಕೆಗಳನ್ನು ಕ್ರಮ ಪ್ರಕಾರವಾಗಿ ಸುವಾರ್ತಾ ಸೇವಾ ಶಿಬಿರಗಳಿಗೆ ಕಳುಹಿಸಲು ಸಹಾಯ ಮಾಡಿದ ದೇವರಿಗೆ ಉಪಕಾರ ಹೇಳಿರಿ. |
| ಫೆಬ್ರವರಿ 26 | ನಮ್ಮ ಆಸ್ಪತ್ರೆ ಸೇವೆಯಲ್ಲಿ ದೇವರು ನಮ್ಮನ್ನು ವಿಶೇಷವಾಗಿ ಆಶೀರ್ವಾದಿಸುವುದಕ್ಕಾಗಿ ಆತನಿಗೆ ಘನಮಾನ ಮಹಿಮೆ ಸಲ್ಲಿಸಿರಿ. |
| ಫೆಬ್ರವರಿ 27 | ನಮ್ಮ **ಕರೆಯ ಪ್ರತಿಧ್ವನಿ ಸಂಸ್ಥೆಯ** ಪ್ರಾರ್ಥನಾ ಕೂಟದವರನ್ನು ವಿಶ್ವಾಸ ಕೂಟದವರನ್ನು ಅಜೀವ ಸದಸ್ಯರುಗಳನ್ನು ಪರಮಾದೇಶದ ಪಾಲುಗಾರರನ್ನು ಅವರೆಲ್ಲರ ಕುಟುಂಬಗಳನ್ನು ದೇವರು ವಿಶೇಷವಾಗಿ ಆಶೀರ್ವಾದಿಸುವುದಕ್ಕಾಗಿ ಆತನನ್ನು ಕೀರ್ತನೆಗಳಿಂದ ಹಾಡಿರಿ. |
| ಫೆಬ್ರವರಿ 28 | ಕಳೆದ ವರ್ಷ ದೇವರು ಸುವಾರ್ತಾ ವಾರ್ತೆಯನ್ನು ಸಾರಲು ಎಲ್ಲಾ ಕಡೆಗಳಲ್ಲಿ ನಿರ್ಜನ ಸ್ಥಳಗಳಲ್ಲಿ ಸಹಾಯ ಮಾಡಿದ ದೇವರ ಕೃಪೆಯು ಶಾಶ್ವತವಾದದ್ದೆಂದು ಹೇಳಿರಿ. |
| ಮಾರ್ಚ್ 01 | ಕಳೆದ ತಿಂಗಳಲ್ಲಿ **ಕರೆಯ ಪ್ರತಿಧ್ವನಿ ಸಂಸ್ಥೆಯು** ನಡೆಸುವ ಎಲ್ಲಾ ಆಲಯಗಳನ್ನು ದೇವರು ಆಶೀರ್ವಾದಿಸಿದಕ್ಕಾಗಿ ಆತನಿಗೆ ಕೃತಜ್ಞತೆಯನ್ನು ತಿಳಿಸಿರಿ. |
| ಮಾರ್ಚ್ 02 | ನಮ್ಮ ವಾಹನಗಳು ಮತ್ತು ಡ್ರೈವರ್‌ಗಳನ್ನು ದೇವರು ಆಶೀರ್ವದಿಸುವುದಕ್ಕಾಗಿ ಆತನಿಗೆ ಘನಮಾನ ಮಹಿಮೆ ಸಲ್ಲಿಸಿರಿ. |
| ಮಾರ್ಚ್ 03 | ನಮ್ಮ ಸೀನಿಯರ್ ಪಾಸ್ಟರ್ ಎಸ್. ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಎಲ್ಲಾ ಕೇಡು ಗಂಡಾಂತರಗಳಿಂದ ತಪ್ಪಿಸಿದಕ್ಕಾಗಿ ಆತನ ನಾಮವನ್ನು ಎಲ್ಲೆಡೆ ಘೋಷಿಸಿರಿ. |

### ಪ್ರಾರ್ಥನಾ ಮನವಿಗಳು: ದೇವರು ಕಾರ್ಯ ನಿರತನಾಗಿದ್ದಾನೆ!

| | |
|---|---|
| ಮಾರ್ಚ್ 04 | **ಕರೆಯ ಪ್ರತಿಧ್ವನಿ ಸಂಸ್ಥೆಯ** ಈ ತಿಂಗಳಿನ ಹಣಕಾಸಿನ ಅಗತ್ಯತೆಗಳನ್ನು ಪೂರೈಸುವಂತೆ ದೇವರಲ್ಲಿ ಬೇಡಿಕೊಳ್ಳಿರಿ. |
| ಮಾರ್ಚ್ 05 | **ಬೈಬಲ್ ಕೋರ್** ಮತ್ತು **ಥಿಯೋಲೋಜಿಕಲ್ ಅಂಚೆ ತರಗತಿ**ಗಳನ್ನು ನಡೆಸಿಕೊಡುವ ಸಂಸ್ಥೆ ಮತ್ತು ವಿದ್ಯಾರ್ಥಿಗಳನ್ನು ಆಶೀರ್ವಾದಿಸುವಂತೆ ಪ್ರಾರ್ಥಿಸಿರಿ. |
| ಮಾರ್ಚ್ 06 | ಎಲ್ಲಾ ಮದ್ಯ ವ್ಯಸನಿಗಳು ತಮ್ಮ ಕೆಟ್ಟ ಅಭ್ಯಾಸವನ್ನು ಬಿಟ್ಟು ದೇವರ ಕಡೆಗೆ ಬರುವಂತೆ ಪ್ರಾರ್ಥಿಸಿರಿ. |
| ಮಾರ್ಚ್ 07 | ಯೌವನ ಹುಡುಗರು ಮತ್ತು ಹುಡುಗಿಯರು ಇನ್ನು ಹೆಚ್ಚಾಗಿ ದೇವರ ಕಡೆಗೆ ಬರುವಂತೆ ಆತನಲ್ಲಿ ಬಿನ್ನಹ ಮಾಡಿರಿ. |
| ಮಾರ್ಚ್ 08 | ನಮ್ಮ ಆಲಯದ ಸದಸ್ಯರು ಎಡೆಬಿಡದೆ ಶಿಬಿರದಲ್ಲಿ ಕೆಲಸ ಮಾಡುವ ಅಭ್ಯರ್ಥಿಗಳಿಗಾಗಿ ಅನುದಿನ ದೇವರಲ್ಲಿ ಬೇಡಿಕೊಳ್ಳುವಂತೆ ಪ್ರಾರ್ಥಿಸಿರಿ. |
| ಮಾರ್ಚ್ 09 | ಆಫ್ರಿಕಾನ್ ಉಪ ಸಂಪಾದಕಿ ಸಹೋದರಿ ಮೆರಿಟಾಜಿ ನೆಲ್ಸನ್ ಮತ್ತು ಅವಳ ಕುಟುಂಬ ಪರಿವಾರಕ್ಕಾಗಿ ದಿನನಿತ್ಯ ಪ್ರಾರ್ಥಿಸಿರಿ. |
| ಮಾರ್ಚ್ 10 | ಇಡೀ ವಿಶ್ವದಲ್ಲಿ ಶಾಂತಿ ನೆಲೆಗೊಳ್ಳುವಂತೆ ದೇವರೊಡನೆ ಪ್ರಾರ್ಥನೆಯಲ್ಲಿ ಜ್ಞಾಪಿಸಿಕೊಳ್ಳಿರಿ. |
| ಮಾರ್ಚ್ 11 | 2021 ನಮ್ಮ **ನೆಹೆಮಿಯ ಕಾಲೇಜುಗಳಿಗೆ** ಯೋಗ್ಯವಾದ ವಿದ್ಯಾರ್ಥಿಗಳನ್ನು ಕೊಡುವಂತೆ ದೇವರಲ್ಲಿ ಪ್ರಾರ್ಥನೆಯೊಡನೆ ಬಿನ್ನಹ ಮಾಡಿರಿ. |
| ಮಾರ್ಚ್ 12 | ದೇಶಗಳಲ್ಲಿ ಉಜ್ಜೀವನ ಉಂಟಾಗಲು ದೇವರೊಡನೆ ಪ್ರಾರ್ಥಿಸಲು ಯೋಗ್ಯ ಪ್ರಾರ್ಥನಾ ವೀರರನ್ನು ಎಬ್ಬಿಸುವಂತೆ ದೇವರಲ್ಲಿ ಕೇಳಿಕೊಳ್ಳಿರಿ. |
| ಮಾರ್ಚ್ 13 | ನಮ್ಮ ಗೋಸ್ಪೆಲ್ ಪ್ರಿಂಟಿಂಗ್ ಪ್ರೆಸ್ಸ್‌ಗೆ ಪಿನ್ನಿಂಗ್ ಮೆಶೀನ್ ಮತ್ತು ಫೋಲ್ಡಿಂಗ್ ಮೆಶೀನ್ ತಕ್ಕೊಳ್ಳಲು ಹಣಕಾಸಿನ ಪೂರೈಕೆ ಆಗುವಂತೆ ದೇವರಲ್ಲಿ ಅಂಗಲಾಚಿ ಬೇಡಿಕೊಳ್ಳಿರಿ. |
| ಮಾರ್ಚ್ 14 | ನಮ್ಮ ರಾಜಕೀಯ ಧುರೀಣರಿಗೆ ದೇವರು ರಕ್ಷಣೆಯ ಅನುಭವವನ್ನು ಕೊಡಲು ದೇವರೊಡನೆ ಎಡೆಬಿಡದೆ ಕೇಳಿಕೊಳ್ಳಿರಿ. |
| ಮಾರ್ಚ್ 15 | ಕರೆಯ ಪ್ರತಿಧ್ವನಿ ಸಂಸ್ಥೆಯು ಇನ್ನೂ ವಿಸ್ತರಿಸಿ ದೇವರ ಒಳ್ಳೆಯ ಸೇವಾ ಕಾರ್ಯ ಮಾಡುವಂತೆ ನಿಮ್ಮ ದಿನನಿತ್ಯದ ಪ್ರಾರ್ಥನೆಯಲ್ಲಿ ದೇವರನ್ನು ಪ್ರಾರ್ಥಿಸಿರಿ. |
| ಮಾರ್ಚ್ 16 | ಜಗತ್ತಿನಲ್ಲಿರುವ ಉಗ್ರವಾದಿ ಮತ್ತು ಅನ್ಯರು ಪಶ್ಚಾತ್ತಾಪ ಪಟ್ಟು ದೇವರ ಕಡೆಗೆ ತಿರುಗುವಂತೆ ಉಪವಾಸ ಮಾಡಿ ಪ್ರಾರ್ಥಿಸಿರಿ. |
| ಮಾರ್ಚ್ 17 | ಶಾಲೆ ಮತ್ತು ಆಫೀಸಿನಲ್ಲಿ ಯೋಗ್ಯವಾದ ಉತ್ತಮ ಕೆಲಸಗಾರರು ಸಿಬ್ಬಂದಿ ವರ್ಗದವರು ಇರುವಂತೆ ದೇವರಲ್ಲಿ ಕಳಕಳಿಯಿಂದ ಕೇಳಿಕೊಳ್ಳಿರಿ. |
| ಮಾರ್ಚ್ 18 | ನಮ್ಮ ಸೀನಿಯರ್ ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬದವರನ್ನು ದುಷ್ಟ ಶಕ್ತಿಗಳಿಂದ ಕಾಪಾಡಲು ಮತ್ತು ಅವರ ಎಲ್ಲಾ ಕಡೆಯಲ್ಲಿರುವ ಪರಿವಾರವನ್ನು ರಕ್ಷಿಸಲು ದೇವರಲ್ಲಿ ಬೇಡಿರಿ. |

## 2. ಯೇಸು ಕ್ರಿಸ್ತನ ಸ್ವರಕ್ಕೆ ಕಿವಿ ಕೊಡಿರಿ

ಯೇಸು ಕ್ರಿಸ್ತನು ಜನರನ್ನು ತನ್ನ ಕಡೆಗೆ ಜನರು, ಪ್ರಿಂಟ್ ಮತ್ತು ಮೀಡಿಯಾದ ಮೂಲಕ ಕರೆಯುತ್ತಿದ್ದಾನೆ. ಆತನು ನಿಮ್ಮನ್ನು ಕೂಡಾ ಕರೆಯುತ್ತಿದ್ದಾನೆ. ನಿಮಗೆ ಹೊಸ ಜೀವನವನ್ನು ಕೊಡಲು ಅಪೇಕ್ಷಿಸುತ್ತಿದ್ದಾನೆ. ಮತ್ತಾಯ 11:28ರ ಪ್ರಕಾರ ಎಲ್ಲೈ ಕಷ್ಟ ಪಡುವವರೇ, ಹೊರೆ ಹೊತ್ತವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ. ನಾನು ನಿಮಗೆ ವಿಶ್ರಾಂತಿ ಕೊಡುವೆನು.

ಕೆಲವರು ಸ್ವಂತ ಜನರಿಂದ ಅಂದರೆ ವರೇದೇ ಮಾನವರು. ದೇವರು ಅವರಲ್ಲಿ ಅವತರಿಸಿದ್ದಾನೆ. ಅವನೇ ಅವರ ವಿಷಯದಲ್ಲಿ ಎಲ್ಲಾ ತಿಳಿಸುತ್ತಾನೆಂದು ಮೋಸ ಪಡಿಸುತ್ತಾರೆ. ಯೇಸು ಕ್ರಿಸ್ತನ ಹಿಂದೆ ಹೋಗಿ ಯಾರೂ ಬಡವನಾಗಲಿಲ್ಲ. ದಾವೀದ ಅರಸನು ಹೀಗೆ ಹೇಳುತ್ತಾನೆ- ನಾನು ಬಾಲಕನಾಗಿದ್ದೆನು. ಈಗ ವೃದ್ಧನಾಗಿದ್ದೇನೆ. ಈ ವರೆಗೂ ನೀತಿವಂತನು ದಿಕ್ಕಿಲ್ಲದೆ ಬಿದ್ದಿರುವುದನ್ನಾಗಲಿ ಅವನ ಸಂತತಿಯವರು ಭಿಕ್ಷೆ ಬೇಡಿ ತಿನ್ನುವುದ್ದಾಗಲಿ ನೋಡಲಿಲ್ಲ. (ಕೀರ್ತನೆ 37:25).

ದೇವದೂತರುಗಳಿರಾ, ಪರಮ ಪ್ರಭಾವವು ಯೆಹೋವನದೇ ಯೆಹೋವನದೇ ಎಂದು ಹೇಳಿ ಕೊಂಡಾಡಿರಿ. ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ. ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋವನಿಗೆ ಅಡ್ಡ ಬೀಳಿರಿ. ಯೆಹೋವನ ಮಹಾಧ್ವನಿಯು ಮೇಘ ಮಂಡಲದಲ್ಲಿ ಕೇಳಿಸುತ್ತದೆ. ಪ್ರಭಾವ ಸ್ವರೂಪನಾದ ದೇವರು ಗುಡುಗುತ್ತಾನೆ. ಯೆಹೋವನು ಆಕಾಶದ ಜಲರಾಶಿಗಳ ಮೇಲೆ ಇದ್ದಾನೆ. ಯೆಹೋವನ ಧ್ವನಿಯು ಎಷ್ಟೋ ಬಲವುಳ್ಳದ್ದು ಎಷ್ಟೋ ಗಂಭೀರವಾದದ್ದು. ಯೆಹೋವನ ಗರ್ಜನೆಗೆ ದೇವದಾರು ವೃಕ್ಷಗಳು ದಡಲ್ ಎಂದು ಮುರಿದು ಬೀಳುತ್ತವೆ. ಯೆಹೋವನು ಲೆಬನೋನ್ ಪರ್ವತದಲ್ಲಿನ ಮಹಾ ದೇವದಾರುಗಳನ್ನೂ ಮುರಿದು ಬಿಡುತ್ತಾನೆ. ಲೆಬನೋನ್ ಪರ್ವತವು ಕರುವಿನೋಪಾದಿಯಲ್ಲಿಯೂ ಸಿರೋನ್ ಬೆಟ್ಟವು ಕಾಡು ಕೋಣದ ಮರಿಯಂತೆಯೂ ಹಾರಾಡುವ ಹಾಗೆ ಮಾಡುತ್ತಾನೆ. ಯೆಹೋನನ ಗರ್ಜನೆಗೆ ಕಾಡು ಹೊರಳಾಡುತ್ತದೆ. ಕಾದೇಶ್ ಅರಣ್ಯವು ಕಂಪಿಸುತ್ತದೆ. ಯೆಹೋವನ ಗರ್ಜನೆಗೆ ಗರ್ಭದ ಜಿಂಕೆಗಳು ಈಯುತ್ತವೆ. ಕಾಡಿನ ಮರಗಳು ಬರಿದಾಗುತ್ತವೆ. ಆಗ ಆತನ ಮಂದಿರದಲ್ಲಿರುವವರೆಲ್ಲರೂ ಎಷ್ಟೋ ಪ್ರಭಾವ ಎನ್ನುತ್ತಾರೆ. ಯೆಹೋವನು ಜಲ ಪ್ರಳಯದಲ್ಲಿ ಆಸೀನನಾಗಿದ್ದನು. ಆತನ ಸದಾ ಕಾಲವೂ ಅರಸನಾಗಿ ಕೂತಿರುವನು. ಯೆಹೋವನು ತನ್ನ ಜನರಿಗೆ ಬಲವನ್ನು ಅನುಗ್ರಹಿಸುವನು. ಆತನು ತನ್ನ ಪ್ರಜೆಗೆ ಸುಕ್ಷೇಮವನ್ನು ದಯಪಾಲಿಸುವನು. (ಕೀರ್ತನೆ 29:1-11).

ಯೇಸು ಕ್ರಿಸ್ತನು ನಿಮ್ಮನ್ನು ಅತ್ಯಂತ ಕಾಳಜಿಯಿಂದ ಕರೆಯುತ್ತಿದ್ದಾನೆ. ಈ ಹೊಸ ವರುಷದಲ್ಲಿ ಹೊಸ ಜೀವನವನ್ನು ನಿಮಗೆ ಕೊಡಲು ಬಯಸುತ್ತಿದ್ದಾನೆ. ಇದರಿಂದ ನೀವು ಬಹಳ ಚೆನ್ನಾಗಿ ಕಾಣುವಿರಿ. ಈ ವಾರ್ತೆಯಿಂದ ಯೇಸು ಕ್ರಿಸ್ತನು ನಿಮ್ಮ ಹೃದಯದ ಬಾಗಿಲನ್ನು ತಟ್ಟುತ್ತಾ ಇದ್ದಾನೆ. ಕೇಳದವರ ಹಾಗೆ ವರ್ತಿಸಬೇಡಿರಿ.

ನೀವು ಅನೇಕ ವರ್ಷಗಳಿಂದ ಕ್ರೈಸ್ತರಾಗಿರಬಹುದು. ನೀವು ದೇವರ ಸೇವೆ ಮಾಡಿರಬಹುದು. ದೊಡ್ಡ ದೊಡ್ಡ ಕಾಣಿಕೆಗಳನ್ನು ಅರ್ಪಿಸಿರಬಹುದು. ಪ್ರಕಟಣೆ 2:4ರಲ್ಲಿ ಹೇಳಿದ ಪ್ರಕಾರ **ಮೊದಲ ಪ್ರೀತಿಯಲ್ಲಿ** ನೀನು ಬಿದ್ದು ಹೋಗಿದ್ದಿ.

ಇನ್ನು ಮುಂದೆ ಹೋಗುವಾಗ ಅವಳ / ಅವನ ಪ್ರಾರ್ಥನಾ ಜೀವಿತದಲ್ಲಿ ಹಿಂದೆ ಬಿದ್ದಿದ್ದಾನೆ. ತಮ್ಮ ವೈಯಕ್ತಿಕ ಜೀವನದಲ್ಲಿ , ಹಣ ಕಾಸಿನ ವಿಷಯದಲ್ಲಿ ನಂಬಿಕೆ ಕಡಿಮೆಯಾಗಿದೆ. ಕೂಡಲೇ ಎಲ್ಲವುಗಳನ್ನು ಸರಿಪಡಿಸಿಕೊಳ್ಳಿರಿ. ಯೇಸು ಕ್ರಿಸ್ತನು ತಿಳಿಯದ ರೀತಿಯಲ್ಲಿ ಹೊತ್ತಿನಲ್ಲಿ, ಮಧ್ಯ ಆಕಾಶದಲ್ಲಿ ಬರಲಿಕ್ಕಿದ್ದಾನೆ. 1 ಥೆಸಲೋನಿಕ 5:2ರಲ್ಲಿ ರಾತ್ರಿ ಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಕರ್ತನ ದಿನವು ಬರುವುದೆಂದು ನೀವೇ ಚೆನ್ನಾಗಿ ತಿಳಿದಿದ್ದೀರಲ್ಲಾ. ಎತ್ತಲ್ಪಟ್ಟ ನಂತರ ಪಶ್ಚಾತ್ತಾಪಕ್ಕೆ ಅವಕಾಶವಿರುವುದಿಲ್ಲ. ಬಿಳಿ ಸಿಂಹಾಸನದಲ್ಲಿ ಯೇಸು ಕ್ರಿಸ್ತನು ಕುಳಿತುಕೊಂಡು ಜಗತ್ತಿಗೆ ತೀರ್ಪು ಕೊಡುವನು. ಆತನ ಬಳಿಗೆ ಬಂದವರನ್ನು ಆತ ತಳ್ಳಿ ಬಿಡುವುದಿಲ್ಲ.

### ಮುಂದೆ ನಡೆಯಬೇಕಾದ ವಿಷಯಗಳನ್ನು ಜಾಗರೂಕತೆಯಿಂದ ಓದಿ ತಿಳಿದುಕೊಳ್ಳಿರಿ:

ಆ ಮೇಲೆ ಬೆಳ್ಳಗಿರುವ ಮಹಾ ಸಿಂಹಾಸನವನ್ನು ಅದರ ಮೇಲೆ ಕೂತಿದ್ದಾತನನ್ನೂ ಕಂಡೆನು. ಆತನೆದುರಿನಿಂದ ಭೂಮ್ಯಾಕಾಶಗಳು ಓಡಿ ಹೋಗಿ ಇನ್ನು ಕಾಣಿಸಿದ ಹಾಗಾದವು. ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವ್ರೂ ಸಿಂಹಾಸನದ ಮುಂದೆ ನಿಂತಿರುವುದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು. ಮತ್ತು ಜೀವ ಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು. ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯ ತೀರ್ಪಾಯಿತು. ಸಮುದ್ರವು ತನ್ನೊಳಗಿದ್ದ ಸತ್ತವರನ್ನು ಒಪ್ಪಿಸಿತು. ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು. ಅವರಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳ ಪ್ರಕಾರ ನ್ಯಾಯ ತೀರ್ಪಾಯಿತು. ಆಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು. ಆ ಬೆಂಕಿಯ ಕೆರೆಯೇ ಎರಡನೆಯ ಮರಣವು ಯಾವನ ಹೆಸರು ಜೀವ ಬಾಧ್ಯರ ಪಟ್ಟಿಯಲ್ಲಿ ಬರೆದಿದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು. (ಪ್ರಕಟಣೆ 20:11-15).

### ನಾವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೋ?

ಧರ್ಮೋಪದೇಶ ಕಾಂಡ 33:29ರಲ್ಲಿ ಇಸ್ರಾಯೇಲ್ಯರೇ ನೀವು ಯೆಹೋವನ ಅನುಗ್ರಹದಿಂದ ಜಯವನ್ನು ಹೊಂದಿದವರು. ಆತನೇ ನಿಮ್ಮನ್ನು ಕಾಯುವ ಡಾಲೂ, ನಿಮ್ಮ ಗೌರವವನ್ನು ಕಾಪಾಡುವ ಕತ್ತಿಯೂ ಆಗಿದ್ದಾನೆ. ಆದುದರಿಂದ ನಿಮ್ಮ ಶತ್ರುಗಳು ನಿಮ್ಮ ಮುಂದೆ ಮುದುರಿಕೊಳ್ಳುತ್ತಾರೆ. ನೀವೋ ಅವರಿಗಿದ್ದ ಎತ್ತರವಾದ ಸೀಮೆಯಲ್ಲಿ ಜಯಶಾಲಿಗಳಾಗಿ ಸಂಚರಿಸುತ್ತೀರಿ.

### 3. ಆತನು ನಿಮ್ಮ ಜೀವವೂ ದೀರ್ಘವಾದ ಜೀವನವೂ ಆಗಿದ್ದಾನೆ. ಆತನನ್ನು ಆತುಕೊಳ್ಳಿರಿ.

ನನ್ನ ದೀರ್ಘವಾದ ಜೀವನವು ಆತನ ಮೇಲೆ ಆತುಕೊಂಡಿರುವುದರಿಂದ ಸಿಹಿಯಾಗಿಯೂ ಫಲದಾಯಕವಾಗಿಯೂ ಇದೆ. ಇದನ್ನು ತಿಂದ ನಂತರವೇ ಅನುಭವಕ್ಕೆ ಬರುವುದು. ನೀವು ಈ ಅವಕಾಶವನ್ನು ಕಳೆದುಕೊಂಡರೆ ಎಲ್ಲಾ ವಸ್ತುಗಳು ಕಳೆದು ಹೋಗಿ ನೀವು ಸೋತವರ ಸಾಲಿನಲ್ಲಿ ನಿಲ್ಲಬೇಕಾಗುವುದು. ಯೇಸುವನ್ನು ಅಂಗೀಕಾರ ಮಾಡಿಕೊಳ್ಳದಿದ್ದರೆ ದುಃಖ ಪಡಬೇಕಾಗುವುದು. ಸುಖಭರಿತವಾದ ಜಯಭೇರಿತ ಜೀವನವನ್ನು ಕಳೆದುಕೊಳ್ಳುವಿರಿ. ಯೇಸುವಿನ ಹತ್ತಿರ ಬರುವುದಕ್ಕೆ ಸುಸಮಯವಾಗಿದೆ. ನೀವು ಆಶೀರ್ವಾದ ಹೊಂದುವಿರಿ. ನಿಮ್ಮ ಇಡೀ ಜೀವಿತವನ್ನು ಯೇಸು ಕ್ರಿಸ್ತನಿಗೆ ಅರ್ಪಿಸಿಕೊಡಿರಿ. ಆತನು ನಿಮಗೆ ಉತ್ತಮವಾದ ಜೀವನವನ್ನು ಕೊಡುವನು. **ಮುಂದಿನ ಗೀತದ ಸಾಲುಗಳು ನಿಮ್ಮ ಜೀವಿತದ ಅನುಭವವಾಗಲಿ.**

•••

# ಒಬ್ಬರನ್ನೊಬ್ಬರು ಸಂತೈಸಿರಿ !
# Comfort one another!

ದೊಡ್ಡ ಸಂಖ್ಯೆಯಲ್ಲಿ ನಮ್ಮ ಸಮಾಜದಲ್ಲಿ ಜನರು ಇರುವಾಗ ಒಬ್ಬರನ್ನೊಬ್ಬರು ಸಂತೈಸ ಬೇಕಾಗುತ್ತದೆ. ಆದರೆ ಒಬ್ಬರನ್ನೊಬ್ಬರು ಹೀನೈಸು ತ್ತಾರೆ. ಒಬ್ಬ ಬಡವರು ಶ್ರೀಮಂತನ ಹತ್ತಿರ ಹಣದ ಸಹಾಯ ಕೇಳಲು ಬಂದಾಗ ಅವನನ್ನು ಬೈದು ಹೊರಗೆ ಕಳುಹಿಸುತ್ತಾರೆ. ಅವಿದ್ಯಾವಂತ ಕೆಲಸ ಹುಡುಕಲು ಹೋದಾಗ ಅವನನ್ನು ಮೋಸಗೊಳಿಸಿ ಓಡಿಸುತ್ತಾರೆ. ರೋಗದಲ್ಲಿ ಹಾಸಿಗೆಯಲ್ಲಿರು ವವನನ್ನು ಸಂತೈಸುವ ಬದಲು ಅವನನ್ನು ಘಾಸಿ ಮಾಡಿ ಭಯ ಪಡಿಸಿ ಇನ್ನಷ್ಟು ಚಿಂತಾಜನಕ ಸ್ಥಿತಿಗೆ ತರುತ್ತಾರೆ.

ಅಂಥ ಜನರಿಗೆ ದೇವರು 1 ಥೆಸಲೋನಿಕ 4:18ರಲ್ಲಿ ಒಟ್ಟಿಗೆ ಸಭೆಯಾಗಿ ಸೇರಿ ಬರುವುದು ಎಷ್ಟೋ ಒಳ್ಳೆಯದು. ಅದಕ್ಕಾಗಿ ಒಬ್ಬರಿಗೊಬ್ಬರು ಸಂತೈಸಿಕೊಳ್ಳಿರಿ. ಇದನ್ನು ನಮಗೆ ಪೌಲನು ಸತ್ಯ ವೇದದಲ್ಲಿ ಬರೆದು ತೋರಿಸಿದ್ದಾನೆ. ಪೌಲನು ನಮಗೆ ಆಜ್ಞಾಪಿಸುವುದಲ್ಲದೆ ಅದನ್ನು ಯಾವ ರೀತಿಯಲ್ಲಿ ಕಾರ್ಯರೂಪದಲ್ಲಿ ಮಾಡುವುದೆಂದು ತೋರಿಸಿಕೊಡುತ್ತಾನೆ. ಆತನು ಬರೆಯುತ್ತಾನೆ ಏನೆಂದರೆ - ಈ ಮಾತುಗಳಿಂದ ನೀವು ಒಬ್ಬರ ನ್ನೊಬ್ಬರು ಸಂತೈಸಿಕೊಳ್ಳಿರಿ. ಹೇಗೆ ಸಂತೈಸ ಬೇಕೆಂದು ದೇವರು ಈ ಪ್ರಸಂಗದ ಮೂಲಕ ನಮ್ಮ ಸಂಗಡ ಮಾತಾಡಲಿ. ಈ ಪ್ರಸಂಗದಲ್ಲಿ ದೇವರು ನಮ್ಮ ಸಂಗಡ ಈ ಮೂರು ವಿಷಯಗಳನ್ನು ಇಟ್ಟಿದ್ದಾನೆ. (1 ಥೆಸಲೊನಿಕ 4:16-18) ಎಲ್ಲಾ ಮಾತುಗಳಿಗಿಂತ 'ಈ ಮಾತುಗಳು' ಬಹಳ ಅದ್ಭುತ ಮತ್ತು ಮಹತ್ವದ ಮಾತುಗಳಾಗಿವೆ.

### 1. ಸ್ವತ: ದೇವರು ತಾನಾಗಿ ಯೇಸು ಕ್ರಿಸ್ತನು ಇಳಿದು ಬರುವನು?

ಕ್ರಿಸ್ತಶಕ 1ನೆಯ ಶತಮಾನದಲ್ಲಿ ಕ್ರೈಸ್ತರನ್ನು ಹೆರೋದ ಮೊದಲಾದ ಅರಸರು ಹಿಂಸಿಸುತ್ತಿದ್ದರು. ಕೆಲವರು ಶಕ್ತ ಸಾಕ್ಷಿಗಳಾಗಿ ಸತ್ತರು. ವಿಶ್ವಾಸಿಗಳಿಗೆ ತಮ್ಮ ಅಭಿವೃದ್ಧಿಯಲ್ಲಿ ನಂಬಿಕೆ ಇರಲಿಲ್ಲ. ಅಪೋಲರಾದ ಪೇತ್ರ, ಯೋಹಾನ ಮತ್ತು ಪೌಲರು ಅಭಿವೃದ್ಧಿಯ ಕುರಿತಾಗಿ ಪ್ರಚಾರ ಮಾಡಲಿಲ್ಲ. ಆದರೆ ಅವರಿಗೆ ಬಲವಾದ ನಂಬಿಕೆ ಮಾರನಾಥ ಅಂದರೆ ಯೇಸು ಕ್ರಿಸ್ತನು ತಿರುಗಿ ಬರುತ್ತಾನೆ. ಇತ್ತು ಇದು ಆದಿ ಕ್ರೈಸ್ತರಲ್ಲಿ ಬಲವಾದ ಅಚಲ ನಂಗಿಕೆಯಾಗಿದ್ದುಕೊಂಡ ಪರಿಶುದ್ಧ ಜೀವಿತ ವನ್ನು ನೋಡಿ ಆತನ ಬರುವಿಕೆಯನ್ನು ಎದುರು ನೋಡುತ್ತಿದ್ದರು. ಈ ಜಗತ್ತಿನ ಕಣ್ಣು ಕಟ್ಟಿನ ಆಢಂಬರದ ಐಶ್ವರ್ಯಕ್ಕಿಂತ ನಿತ್ಯವಾದ ಪರ ಲೋಕದ ನಿತ್ಯತ್ವದ ಭಾಗ್ಯಕ್ಕಾಗಿ ಆಶೆ ಪಡುತ್ತಿದ್ದರು. ಆಲಯಗಳಲ್ಲಿ ಅವರು ದೇವರನ್ನು ಎಡೆಬಿಡದೆ ಸ್ತುತಿಸುತ್ತಿದ್ದರು. ಕಷ್ಟ ಹಿಂಸೆಗಳಲ್ಲಿ ಹೋಗುತ್ತಿರು ವಾಗ ಕೂಡಾ ಅವರು ಕ್ರಿಸ್ತನಿಗಾಗಿ ಬದುಕುವುದು ಆತನಿಗಾಗಿ ಸಾಯುವುದು. ಲಾಭವೇ ಸರಿ. ಫಿಲಿಪ್ಪಿ 1:21. ಅವರು ಹಿಂಸೆಯ ಶಿಕ್ಷೆಗೆ ಒಳಗಾದಾಗ ಧೈರ್ಯದಿಂದ ನಾನಂತೂ ಹಿಡಿದುಕೊಂಡವ ನೆಂದು ನನ್ನನ್ನು ಈ ವರೆಗೂ ಎಣಿಸಿಕೊಳ್ಳುವುದಿಲ್ಲ. ಆದರೆ ಒಂದು ನಾನು ಈ ಹಿಂದಿನ ಸಂಗತಿಗಳನ್ನು ಮರೆತು ಬಿಟ್ಟು ಮುಂದಿನವುಗಳನ್ನು ಹಿಡಿಯುವು ದಕ್ಕೆ ಎದೆ ಬಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕ ವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿ ಮಾಡಿಕೊಂಡು ಓಡುತ್ತಾ ಇದ್ದೇನೆ. (ಫಿಲಿಪ್ಪಿ 3:13, 14).

ಅಸ್ವಸ್ಥತೆಯನ್ನು ಗುಣ ಮಾಡಬಹುದು. ಅದು ಅಂತಿಮವಲ್ಲ. ಮಳೆ ಬಂದು ಹೋದ ನಂತರ ಮೋಡಗಳು ಪದೇ ಪದೇ ಬರುತ್ತಾ ಇರುತ್ತವೆ. ಪ್ರತಿಯೊಬ್ಬನ ಜೀವಿತದಲ್ಲಿ ಅಸ್ವಸ್ಥತೆ ಬರುತ್ತಾ ಇರುತ್ತವೆ. ಒಬ್ಬನು ತನ್ನ ಸಾಲವನ್ನು ತೀರಿಸಿದ ನಂತರ ಎಲ್ಲಾ ಕಷ್ಟದಿಂದ ಪಾರಾದೆನು ಎಂದು ಎಣಿಸಬಹುದು. ಇದು ಶಾಶ್ವತವಾದ ವಿಷಯವಲ್ಲ. ಇದನ್ನು ತಿಳಿದ ಅಭಿಷೇಕ ಹೊಂದಿದ ಆದಿ ಕ್ರೈಸ್ತರು ದೇವರಾದ ಯೇಸು ಕ್ರಿಸ್ತನ ಶಕ್ತಿಯನ್ನು ಅರಿತು ಕೊಂಡು ಒಬ್ಬರಿಗೊಬ್ಬರು ಸಂತೈಸುತ್ತಿರಲಿಲ್ಲ. ಲೋಕದ ರೀತಿಯಲ್ಲಿ ಕುರಿತು ಹೇಳುವುದಾದರೆ ಒಬ್ಬರಿಗೊಬ್ಬರು ಸಂತೈಸುವಾಗ ಮಾರನಾಥ ಎಂದು ಹೇಳುತ್ತಿದ್ದರು.

ಈ ದಿನದಲ್ಲಿ ನಾವು ಬೇರೆಯವರನ್ನು ಹೇಗೆ ಸಂತೈಸುತ್ತೇವೆ. ನಾವು ಹೇಗೆ ಆದರಣೆಯನ್ನು ಹೊಂದುತ್ತೇವೆ? ಸ್ವಲ್ಪ ಹಣ ಸಿಕ್ಕಿದರೆ ನಾವು ಆದರಣೆ ಹೊಂದುತ್ತೇವೆಯೋ? ಅಸ್ವಸ್ಥತೆ ದೂರ ವಾದರೆ ಸಂತೈಸುವಿಕೆ ಹೊಂದುತ್ತೇವೆಯೋ? ದೊಡ್ಡ ಮೊತ್ತದ ಕೆಲಸ ಸಿಕ್ಕುವಾಗ ನಾವು ತೃಪ್ತಿ ಪಡುತ್ತೇವೆಯೋ? ಈ ಎಲ್ಲಾ ವಿಷಯಗಳು ಬೇಕಾ ಗಿವೆ. ಎರಡನೆಯ ಯೇಸು ಕ್ರಿಸ್ತನ ಬರೋಣವು ನಮಗೆ ಸಂತೈಸುವಿಕೆ ಆದರಣೆಯನ್ನು ತರುವಂಥ ದಾಗಿದೆ. ಇದು ಶಾಶ್ವತವಾದದ್ದು. ನಾವು ಇದಕ್ಕಾಗಿ ತಯಾರು ಮಾಡಿಕೊಳ್ಳೋಣ. ಈ ಮಾತುಗಳಿಂದ ನಾವು ಒಬ್ಬರಿಗೊಬ್ಬರು ಸಂತೈಸಿಕೊಳ್ಳೋಣ.

### 2. ಕ್ರಿಸ್ತನಲ್ಲಿ ಸತ್ತವರು ಮೊದಲು ಎದ್ದು ಬರುವರು! (1 ಥೆಸಲೋನಿಕ 4:16)

ಪ್ರತಿಯೊಬ್ಬನ ಜೀವಿತದಲ್ಲಿ ಮರಣವು ಒಂದು ದುಃಖಕರವಾದ ವಿಷಯವಾಗಿದೆ. ತಮ್ಮ ಆಪ್ತರನ್ನು ಕಳಕೊಂಡಾಗ ಕೆಲವೊಮ್ಮೆ ನಮಗೆ ಹೇಗೆ ಸಂತೈಸುವುದು ಎಂದು ಕಷ್ಟಕರವಾದ ವಿಷಯ ವಾಗಿದೆ. ಅಂಥ ಜನರನ್ನು ಸಂಧಿಸಲು ಹೋಗು ವಾಗ ನಾವು ಹೀಗೆ ಹೇಳುತ್ತೇವೆ. ದೇವರು ಸತ್ತ ಮನುಷ್ಯನ ಸ್ಥಳವನ್ನು ತುಂಬಲಿ. ಕೆಲವರು ಜಾಣತನದ ಮಾತುಗಳಿಂದ ಅವರನ್ನು ಸಂತೈಸು ತ್ತಾರೆ. ನಾವು ಎಷ್ಟು ಸಂತೈಸಿದರೂ ನಿಜವಾದ ಸಂತೈಸುವಿಕೆಯನ್ನು ಪೌಲನು ಹೀಗೆ ಬರೆದಿರು ವನು. ಜ್ಞಾನೋಕ್ತಿ 14:3 ರಲ್ಲಿ ಶಿಷ್ಟನು ಮರಣ ಕಾಲದಲ್ಲಿಯೂ ಆಶ್ರಯ ಹೊಂದುವನು. ನೀತಿ ವಂತನಿಗೆ ತನ್ನ ಮರಣಾನಂತರ ನಿತ್ಯ ಜೀವ ಸ್ಥಿರ ವಾಗಿದೆ ಎಂದು ನಂಬಿಕೊಂಡು ಸಂತೋಷದಲ್ಲಿರು ವನು. ಕ್ರಿಸ್ತನಲ್ಲಿ ನಿದ್ದೆ ಹೋದವರು ಆತನು ಬರುವಾಗ ಮೊದಲು ಎದ್ದು ಆತನನ್ನು ಸೇರಿ ಕೊಳ್ಳುವುದು ದೊಡ್ಡ ಭಾಗ್ಯಕರವಾದದ್ದೆಂದು ಎಣಿಸಿ ಕೊಳ್ಳುವರು. ಪುನರುತ್ಥಾನ ಹೊಂದಿದ ಕ್ರಿಸ್ತನನ್ನು ಮೊದಲು ನೋಡಿದ ಮಗ್ದಲದ ಮರಿಯಳು ಬಹಳ ಸಂತೋಷಗೊಂಡಳು. ತೀರಿಹೋದ ಸಂತರು, ರಾಜರಾಜರ ಒಡೆಯರ ಒಡೆಯನು ತಿರುಗಿ

ಬರುವಾಗ ಎಷ್ಟು ಸಂತೋಷಗೊಳ್ಳುವರು. ಇದನ್ನು ತಿಳಿದು ಅಪೊಸ್ತಲನಾದ ಪೌಲನು 1ನೇ ಕೊರಿಂಥ 15:15ರಲ್ಲಿ ಹೀಗೆ ಬರೆಯುತ್ತಾನೆ. ಮರಣವೇ ನಿನ್ನ ಜಯವೆಲ್ಲ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ? ಈ ಮಾತಿನಿಂದ ಅಸೌಖ್ಯದಲ್ಲಿದ್ದವರಿಗೆ ಸಂತೈಸೋಣ. ಯಾರು ತಮ್ಮ ಆಪ್ತರನ್ನು ಕಳೆದು ಕೊಂಡಿದ್ದಾರೋ ಅವರಿಗೆ ದೇವರು ಆದರಣೆಯ ಮಾತುಗಳನ್ನು ಕೊಡಲಿ.

ದೇವರು ನಮ್ಮನ್ನು ಆಲಯಗಳಲ್ಲಿ ಒಬ್ಬರಿಗೊಬ್ಬರು ಸಂತೈಸಿಕೊಳ್ಳಲು ಕರೆದಿದ್ದಾನೆ. ಇದರಿಂದಾಗಿ ನಾವು ಆತನೊಂದಿಗೆ ಬರುವಾಗ ಫಕ್ಕನೇ ಎತ್ತಲ್ಪಡುವ ಈ ಅವಕಾಶವನ್ನು ಪಡೆಯುವಂತಾಗಲು ದೇವರನ್ನು ಬೇಡಿಕೊಳ್ಳೋಣ.

### 3. ನಾವು ಯಾವಾಗಲೂ ದೇವರೊಂದಿಗೆ ಇರುವೆವು

ದೇವರಲ್ಲಿ ಯಾರು ನಂಬಿಕೆಯಿಟ್ಟು ಬದುಕುತ್ತಾರೋ ಅವರ ಎಲ್ಲಾದಕ್ಕಿಂತ ದೊಡ್ಡ ನಿರೀಕ್ಷೆ ದೇವರೊಟ್ಟಿಗೆ ಯಾವಾಗಲೂ ಇರುವುದಾಗಿದೆ. ಇದು ದೇವರ ಮೇಲೆ ಇಟ್ಟ ನಂಬಿಕೆಯ ಫಲವಾಗಿ ಅಪೊಸ್ತಲನಾದ ಪೌಲನು ಫಿಲಿಪ್ಪಿ 1:23ರಲ್ಲಿ ಹೀಗೆ ಬರೆಯುತ್ತಾನೆ. ಈ ಎರಡರ ನಡುವೆ ಸಿಕ್ಕಿಕೊಂಡಿದ್ದೇನೆ. ಇಲ್ಲಿಂದ ಹೋಗಿ ಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ ಅಭಿಲಾಷೆಯಾಗಿದೆ.

ಒಂಟೀ ಜೀವನವನ್ನು ನಡೆಸುವವರು ಸಂತೈಸುವಿಕೆಯನ್ನು ಪಡೆದುಕೊಳ್ಳುವುದಿಲ್ಲ. ಮನುಷ್ಯನು ಒಂಟಿತನ ಮತ್ತು ಶೂನ್ಯತನವನ್ನು ಸಹಿಸಿಕೊಳ್ಳಲಾರನು. ಇಂಥವರು ಯೇಸು ಕ್ರಿಸ್ತನೊಟ್ಟಿಗೆ ಆತನ ಬರೋಣವನ್ನು ಎದುರು ನೋಡಿಕೊಂಡು ನಿತ್ಯ ಆದರಣೆಯನ್ನು ಹೊಂದಿಕೊಳ್ಳಬಹುದು. ನಾವು ಆತನೊಟ್ಟಿಗೆ ಯಾವಾಗಲೂ ಸಂತೋಷಭರಿತರಾಗಿ ಇರಬಹುದು. ನಾವು ಅಂಥ ಜೀವಿತವನ್ನು ಪರಲೋಕದಲ್ಲಿ ಕ್ರಿಸ್ತನೊಂದಿಗೆ ಪಡೆದುಕೊಳ್ಳಬೇಕಾದರೆ ಅಂಥ ಜೀವಿತವನ್ನು ಈ ಲೋಕದಲ್ಲಿ ಕೂಡಾ ಜೀವಿಸಬೇಕು. ಆಗ ಎರಡನೆಯ ಬರೋಣದ ಸಮಯದಲ್ಲಿ ಸಂತೋಷದಿಂದ ಆನಂದಭರಿತವಾದ ಜೀವನವನ್ನು ಆತನೊಂದಿಗೆ ಕಳೆಯಲು ಸಹಾಯ ಮಾಡುವುದು. ಹನೋಕನು ದೇವರೊಂದಿಗೆ ನಡೆದನು. ಆದಿಕಾಂಡ 5:55 ಕೀರ್ತನೆ 73:28ರಲ್ಲಿ ನನಗಾದರೋ ದೇವರ ಸಾನಿಧ್ಯವೇ ಭಾಗ್ಯವು. ಕೀರ್ತನಾಗಾರನು ಯಾವಾಗಲೂ ದೇವರೊಂದಿಗಿರುವುದು ಬಹಳ ಸಂತೋಷದ ವಿಷಯವಾಗಿರುವುದು ಎಂದು ತಿಳಿಸಿದ್ದಾನೆ. ಯೇಸು ಕ್ರಿಸ್ತನು ಮರಿಯಳಲ್ಲಿ ಸಣ್ಣ ಮಗುವಿರುವಾಗಲೇ ಅವಳ ಹೃದಯವು ತನ್ನ ದೇವರಲ್ಲಿ ಉಲ್ಲಾಸಗೊಂಡಿದೆ. (ಲೂಕ 1:47) ಕ್ರೈಸ್ತರು ಅಭಿವೃದ್ಧಿ ಹೊಂದಬೇಕಾದರೆ ಕ್ರಿಸ್ತನ ಸಂಗಡ ಅನ್ಯೋನ್ಯತೆಯಲ್ಲಿರಬೇಕು. ದೇವರು ನಮ್ಮೊಂದಿಗಿದ್ದಾನೆ ಎನ್ನುವ ಜ್ಞಾನ ಮಹತ್ವವುಳ್ಳದಾಗಿದೆ.

ಯೇಸು ಹೇಳುತ್ತಾ ಇದ್ದಾನೆ - ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು. ಅವನು ನನ್ನ ಸಂಗಡ ಊಟ ಮಾಡುವನು (ಪ್ರಕಟಣೆ 3:20). ಯಾರು ಈ ಆಮಂತ್ರಣವನ್ನು ಸ್ವೀಕರಿಸುತ್ತಾರೋ ಅವರು ಆದರಣೆಯನ್ನು ಪಡೆದುಕೊಳ್ಳುವರು. ಶೂನೇಮ್ಯಳಾದ ಸ್ತ್ರೀ ಪರಮಗೀತ 2:4 ರಲ್ಲಿ ಹೇಳಿದ ಪ್ರಕಾರ ಅವನು ನನ್ನನ್ನು ಔತಣ ಶಾಲೆಗೆ ಬರಮಾಡಿಕೊಂಡನು. ನನ್ನ ಮೇಲೆ ಅವನು ಎತ್ತಿದ ಧ್ವಜವು ಪ್ರೀತಿಯೇ ಆತನ ಪ್ರೀತಿಯ ಧ್ವಜದ ಮೇಲೆಯೇ ಆತನನ್ನು ಅತುಕೊಳ್ಳೋಣ. ಆಗ ನಾವು ನಿಜವಾಗಿಯೂ ಸಂತೈಸುವಿಕೆಯನ್ನು ಹೊಂದುವೆವು. ನಮ್ಮೊಂದಿಗೆ ದೇವರ ಕೃಪೆಯು ಯಾವಾಗಲೂ ಇರಲಿ. ●●●

**ಕರೆಯ ಪ್ರತಿಧ್ವನಿ ಪತ್ರಿಕೆಯಲ್ಲಿ ಜಾಹೀರಾತಿನ ಕ್ರಯ :**

| ಸೈಜ್ | ಪ್ರತಿ ಭಾಷೆಗೆ | 16 ಭಾಷೆಗಳಲ್ಲಿ |
|---|---|---|
| ಕಾಲು ಪುಟ | ರೂ. 2,000 | ರೂ. 30,000 |
| ಅರ್ಧ ಪುಟ | ರೂ. 3,500 | ರೂ. 50,000 |
| ಸಂಪೂರ್ಣ ಪುಟ | ರೂ. 5,000 | ರೂ. 70,000 |


## ಸುದ್ದಿಗಳು (News)

### ಬಾಲ್ಯ ವಿವಾಹದ ವಿರೋಧವಾಗಿ ಹೋರಾಟ!

ಬಾಲ್ಯ ವಿವಾಹ ಭಾರತ ದೇಶದಲ್ಲಿ ಅಂಟುರೋಗದಂತೆ ಹರಡುತ್ತಾ ಇದೆ. ಲೆಕ್ಕದ ಪ್ರಕಾರ 2016 UNICEF ಪ್ರಕಾರ 30 ವರ್ಷಗಳಿಂದ ಇಚೀಗೆ 50% ರಿಂದ 27% ವರೆಗೆ ಕಡಿಮೆಯಾಗಿದೆ. ಪ್ರತಿದಿನ 15,600 ಹುಡುಗಿಯರು (ವರ್ಷಕ್ಕೆ ಪ್ರತಿ 6 ಮಿಲಿಯನ್) ಬಾಲ್ಯ ವಿವಾಹಕ್ಕೆ ಭಾರತದಲ್ಲಿ ತುತ್ತಾಗಿದ್ದಾರೆ. ಹುಡುಗಿಯರನ್ನು ಕಡ್ಡಾಯವಾಗಿ ಶಾಲೆಯಿಂದ ಬಿಡಿಸಿ ಗಂಡನ ಮನೆಯಲ್ಲಿ ಅವರು ಗುಲಾಮರಾಗಿದ್ದಾರೆ. ಅವರು ಗರ್ಭಿಣಿಯಾದಾಗ ಗರ್ಭಕೋಶ ಬೆಳೆಯದ ಕಾರಣ ಹೆರಲಿಕ್ಕಾಗಿ ಮರಣಕ್ಕೆ ತುತ್ತಾಗಿದ್ದಾರೆ.

ಡಾ। ಅಶೋಕ್ ಡೈಲಾಚಂದ್ 40 ವರ್ಷಗಳಿಂದ ಬಾಲ್ಯ ವಿವಾಹದ ವಿರೋಧವಾಗಿ ಹೋರಾಟ ಮಾಡುತ್ತಾ ಇದ್ದಾರೆ. ಕ್ರಿಶ್ಚನ್ ಮೆಡಿಕಲ್ ಕಾಲೇಜು ವೆಲ್ಲೂರಿನ ಅಭ್ಯರ್ಥಿಯಾದದ್ದರಿಂದ ಅವರನ್ನು 2019 ರಲ್ಲಿ ಮಿಲಿಯಗಟ್ಟಳೆ ಮಕ್ಕಳ ನಾಯಕನೆಂದು ವರ್ಲ್ಡ್ಸ್ ಚಿಲ್ಡ್ರನ್ಸ್ ಪೇಜ್ (WCP) ಮಕ್ಕಳ ನೋಬೆಲ್ ಪ್ರೈಝುನ್ನು ಗಳಿಸಿಕೊಂಡಿದ್ದಾರೆ. ಡಾ। ಅಶೋಕ್ ಮೂಪೆ 1 HMP ಹುಡುಗಿಯರ ಕ್ಲಬ್ 1975 ರಲ್ಲಿ ಸ್ಥಾಪನೆಯಾಗಿ ಸುಮಾರು 500 ಹಳ್ಳಿಗಳಿಂದ 50,000 ಹುಡುಗಿಯರು ತಮ್ಮ ಹಕ್ಕು ಮತ್ತು ವಿದ್ಯಾ ಕೌಶಲ್ಯತೆಗಳ ಬಗ್ಗೆ ತಿಳಿದುಕೊಂಡಿದ್ದಾರೆ. ಒಬ್ಬರನ್ನೊಬ್ಬರು ಅತುಕೊಂಡು, ಚತುರತೆಯನ್ನು ಕಲಿತುಕೊಂಡು ತಮ್ಮ ತಾಯಿ - ತಂದೆಯವರಿಗೆ ಬಾಲ್ಯ ವಿವಾಹದ ಹಾನಿಯ ವಿಷಯವನ್ನು ತಿಳಿಸಿ ಅದರ ಬದಲು ಕಲಿಯುವಿಕೆಗೆ ಪ್ರಾಧಾನ್ಯತೆಯನ್ನು ಕೊಡುವಂತೆ ಮನ ಒಲಿಸಿದ್ದಾರೆ.

Source : wtps/1/worldschildrensprize.or/ashokstory

- ಫೋರ್ ರನ್ನರ್ (ಆಗಸ್ಟ್ 2019)

**– ದ ನಿವ್ ಇಂಡಿಯನ್ ಎಕ್ಸ್‌ಪ್ರೆಸ್ (ಫೋರ್ ರನ್ನರ್ ಸೆಪ್ಟಂಬರ್ 2019)**



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ, ಅವರು ಅರ್ಥೈಸಿಕೊಳ್ಳಲಿ" (ಕೀರ್ತನೆ 24:15)

**'ನೀವು ದೇವ ಜನರಿಗೆ ಉಪಚಾರ ಮಾಡಿದಿರಿ ಇನ್ನೂ ಮಾಡುತ್ತಾ ಇದ್ದೀರಿ. ಈ ಕೆಲಸವನ್ನು ಇದರಲ್ಲಿ ನೀವು ದೇವರ ನಾಮದ ವಿಷಯವಾಗಿ ತೋರಿಸಿದ ಪ್ರೀತಿಯನ್ನು ಆತನು ಮರೆಯುವುದಕ್ಕೆ ಅನ್ಯಾಯಸ್ಥನಲ್ಲ'.** ಇಬ್ರಿಯ 6:10.

1982ರಲ್ಲಿ ನಾನು ಸೇವೆಯಲ್ಲಿ ಬಹಳ ಪ್ರಯಾಣ ಮಾಡುತ್ತಾ ಇರುವಾಗ ಸ್ಥಳೀಯ ಸೇವೆಯ ಕಡೆ ಕೂಡಾ ಗಮನವನ್ನು ಕೊಡ ಬೇಕಾಗುತ್ತಿತ್ತು. ಆ ಸಮಯದಲ್ಲಿ ನನ್ನ ಬಲಕೈ ಬಹಳ ನೋವನ್ನು ಕೊಡುತ್ತಿತ್ತು. ಆಗ ನನಗೆ ಮಾಸ ಪತ್ರಿಕೆಗೆ ಬರೆಯಲಿಕ್ಕೆ ಆಗುತ್ತಿರಲಿಲ್ಲ. ಯಾವ ಹೆಚ್ಚಿನ ಜವಾಬ್ದಾರಿಗಳನ್ನು ತೆಗೆದು ಕೊಳ್ಳಲು ಆಗುತ್ತಿರಲಿಲ್ಲ ನನಗೆ ಪೆನ್ನು ಹಿಡಿಯಲು ಮತ್ತು ವಾಹನ ನಡೆಸಲು ಆಗುತ್ತಿರಲಿಲ್ಲ. ನನ್ನ ಬಲಕೈಯನ್ನು ಮೇಜಿನ ಮೇಲೆ ಇಡಬೇಕಾದರೆ ಎಡ ಕೈಯನ್ನು ಉಪಯೋಗಿಸಬೇಕಾಗುತ್ತಿತ್ತು. ನನ್ನ ಎಲ್ಲಾ ಕೆಲಸಗಳಿಗಾಗಿ ಬೇರೆಯವರ ಮೇಲೆ ಆತುಕೊಳ್ಳಬೇಕಾಗಿ ಬಂತು. ಅದಲ್ಲದೆ ಅದು ತಡೆಯಲಾರದ ನೋವು ಕೈಯಲ್ಲಿ ಉಂಟಾಗು ತ್ತಿತ್ತು.

ಪ್ರಾರ್ಥಿಸುವುದು ಮಾತ್ರವಲ್ಲದೆ ನಾನು ಕೆಲವು ಎಕ್ಸ್‌ರೇ ಸೈಜುಗಳನ್ನು ಕಲಿತೆನು. ಇದು ಒಂದು ವರ್ಷದ ವರೆಗೆ ನಡೆಯಿತು. ನೋವು ಜಾಸ್ತಿಯಾಗುತ್ತಾ ಬಂದ ಹಾಗೆ ನನಗೆ ಯಾವ ಉಪಾಯವೂ ಗುಣವೂ ಇಲ್ಲ ಎಂದು ಅರಿತು ಕೊಂಡೆನು.

## ದೇವರು ನನಗೆ ಒಂದು ದಾರಿಯನ್ನು ತೋರಿಸಿಕೊಟ್ಟನು

ಒಂದು ದಿವಸ ಪ್ರಾಯದ ದೇವರ ಸೇವಕ ಮತ್ತು ಆತನ ಹೆಂಡತಿ ನನ್ನನ್ನು ನೋಡಲು ಬಂದರು. ಆತನು ತನ್ನ ಸುವಾರ್ತ ಸೇವೆಗೆ ನಾನು ಸಹಾಯ ಮಾಡಬೇಕೆಂದು ಕೇಳಿಕೊಂಡರು. ನಮ್ಮ ಸಭೆಯಲ್ಲಿ ಮತ್ತು ಕೂಟದಲ್ಲಿ ಅವರನ್ನು ಉಪಯೋಗಿಸಿಕೊಂಡೆನು. ಆತನ ಆಂಗ್ಲ ಭಾಷೆ ಯಲ್ಲಿ ಮಾಡುವ ಪ್ರಸಂಗವನ್ನು ತಮಿಳಿಗೆ ತುರ್ಜುಮೆ ಮಾಡುತ್ತಿದ್ದೆನು. ಬೇರೆ ಬೇರೆ ಕಡೆಗೆ ಅವರನ್ನು ಕೊಂಡು ಹೋಗುತ್ತಿದ್ದೆನು. ದೇವರು ಅವರನ್ನು ಬಹಳವಾಗಿ ಉಪಯೋಗಿಸಿದನು. ಅನೇಕ ಮಂದಿ ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನಾಗಿ ಅಳವಡಿಸಿಕೊಂಡರು. ಬಹಳ ಮಂದಿ ಗಂಟಲು ನೋವು ಬೆನ್ನು ನೋವಿನಿಂದ ಗುಣ ಮುಖರಾಗುವುದನ್ನು ನೋಡುತ್ತಿದ್ದೆನು. ಕೆಲವರು ದುಷ್ಟ ಶಕ್ತಿಯಿಂದ ಬಿಡುಗಡೆ ಹೊಂದುವುದನ್ನು ನೋಡುತ್ತಿದ್ದೆನು. ಆದರೆ ನನ್ನ ಕೈಯಲ್ಲಿರುವ ನೋವನ್ನು ಅವರಿಗೆ ತಿಳಿಸಲಿಲ್ಲ.

ಅವರು ದಂಪತಿಗಳಿಗೆ ಪ್ರಾಯವಾದದ್ದರಿಂದ ಅವರ ಎರಡು ಸೂಟು ಕೇಸು ಮತ್ತು ನನ್ನದ್ದನ್ನು ಹಿಡಿದುಕೊಂಡು ಹೋಗುತ್ತಿದ್ದೆನು. ಆದರೆ ಅದನ್ನು ನಾನು ಸಂತೋಷದಿಂದ ಮಾಡಿದೆನು. ಆ ದೇವರ ಮನುಷ್ಯ ಇಷ್ಟು ನಿನಗೆ ಒಬ್ಬನಿಗೆ ಎತ್ತಿಕೊಂಡು ಹೋಗಲು ಸಾಧ್ಯವಾ? ಎಂದು ಕೇಳುತ್ತಿದ್ದರು? ನೀನು ಆರೋಗ್ಯದಲ್ಲಿ ಇದ್ದಿಯಲ್ಲಾ? ಒಂದು ಸಲ ಕೇರಳದ ಮೂನಾರ್‌ನಲ್ಲಿರುವಾಗ ಎಲ್ಲಾ ಲಗ್ಗೇಜುಗಳನ್ನು ಬಸ್ಸಿಗೆ ಹಾಕಲು ನೋಡಿದೆನು. ಕಾರಣಾಂತರದಿಂದ ಆ ಲಗ್ಗೇಜು ಮತ್ತು ಬೇರೆಯವರ ಲಗ್ಗೇಜು ಕೂಡಾ ಮಾಲಿ ನನ್ನ ಮೇಲೆ ಬಿತ್ತು. ನಾನು ಕೆಳಗೆ ಬಿದ್ದೆನು. ಎಲ್ಲಾ ಪ್ರಯಾಣಿಕರು ಬೊಬ್ಬೆ ಹಾಕಿ ನನ್ನ ಸಹಾಯಕ್ಕೆ ಬಂದರು. ನನ್ನ ಬಲಕೈ ನೋವು ದಿನ ದಿನಕ್ಕೆ ಏರುತ್ತಾ ಹೋಯಿತು. ಆ ಲಗ್ಗೇಜುಗಳನ್ನು ಎತ್ತಿ ಕೊಂಡು ನನ್ನ ಭಾಷಾಂತರವನ್ನು ಮುಂದುವರಿಸಿ ದೆನು.

ಕೊನೆಗೆ ಅವರು ಭಾರತ ದೇಶದಲ್ಲಿ ತಮ್ಮ ಸೇವೆಯನ್ನು ಮಾಡಿ ಚೆನ್ನೈಯಿಂದ ವಿಮಾನದಲ್ಲಿ ತಮ್ಮ ಸ್ಥಳಕ್ಕೆ ಹೋದರು. ಅವರನ್ನು ವಿಮಾನ ನಿಲ್ದಾಣದಲ್ಲಿ ನೋಡಲು ಹೋದಾಗ ನನಗೆ ನೋವನ್ನು ಸಹಿಸಲು ಆಗಲಿಲ್ಲ. ಅವರನ್ನು ನಿಲ್ದಾಣದಲ್ಲಿ ಬಿಟ್ಟು ಬಂದ ನಂತರ ಆ ನೋವು ಒಂದು ವರ್ಷದ ಮೇಲೆ ಇದ್ದದ್ದು ಈಗ ಸಂಪೂರ್ಣವಾಗಿ ಗುಣವಾಯಿತು. ಆ ದಿನದಿಂದ ಬಹಳ ಸುಲಭವಾಗಿ ಯಾವ ಕೆಲಸವನ್ನು ಮಾಡಲು ಕೂಡ ಶಕ್ತನಾಗಿರುವೆನು.

ಆ ನೋವನ್ನು ಅನುಭವಿಸಿ ಈಗ ಸುಮಾರು 30 ವರುಷಗಳಾಗಿವೆ. ಮತ್ತೆ ನನಗೆ ಅಂಥ ನೋವು ಬರಲಿಲ್ಲ. ನನಗೆ ಅದ್ಭುತವಾಗಿ ಗುಣವಾಯಿತು. ನನ್ನ ನೋವನ್ನು ಲೆಕ್ಕಿಸದೆ ಅವರಿಗೆ ನಾನು ಸಹಾಯ ಮಾಡಿದೆನು. ಆ ದಂಪತಿಗಳಲ್ಲಿ ಇದ್ದ ಗುಣಪಡಿಸುವಿಕೆಯು ನನ್ನ ಮೇಲೆ ಬಂದದ್ದರಿಂದ ನಾನು ಗುಣಮುಖನಾದೆನು. ಅನಂತರದ ದಿನ ಗಳಲ್ಲಿ ನಾನು ಅವರನ್ನು ನೋಡಲಿಲ್ಲ. ಅವರನ್ನು ಸಂಧಿಸಲೂ ಇಲ್ಲ. ಅವರ ಹೆಸರುಗಳು ನೆನಪಿವೆ. ಶ್ರೀಮಾನ್ ಹೆಡ್ಜಸ್ ಮತ್ತು ಸಲ್ಲಿ ಹೆಡ್ಜಸ್.

ಈಗ ನನ್ನನ್ನು ಒಳ್ಳೆಯ ರೀತಿಯಲ್ಲಿ ಮಗುವಿ ನಂತೆ ನೋಡಿಕೊಳ್ಳುವ ದೇವರ ಸೇವಕರುಗಳು ಮತ್ತು ಇತರರು ಇದ್ದಾರೆ. ದೇವರು ನನ್ನನ್ನು ವಿಶೇಷ ರೀತಿಯಲ್ಲಿ ನೋಡಿಕೊಳ್ಳುತ್ತಾನೆ. ದೇವರ ಜನರು ನನಗೆ ಸಹಾಯ ಮಾಡಲು ತಯಾರಿ ದ್ದಾರೆ. ಇಡೀ ಜಗತ್ತಿನ ಸುತ್ತಮುತ್ತಲೂ ಆತನ ಕೆಲಸ ಮಾಡಲಿಕ್ಕೆ ಹೋಗುವಾಗ ದೇವ ಜನರು ಸಹಾಯಕ್ಕಾಗಿ ಇದ್ದಾರೆ.

ನಿನ್ನ ಸೇವೆಯ ಮಾರ್ಗ ನಿಮಗೆ ಕಠಿಣವಾಗಿ ತೋರುತ್ತದೆಯೋ? ಅದು ಕಹಿಯಾಗಿದೆಯೋ, ಹಸಿವೆ, ಬಡತನ, ಅನಾರೋಗ್ಯ ಸಾಲದಿಂದ ಕಷ್ಟಪಡುತ್ತಿದ್ದೀರೋ? ಬೇರೆ ದೇವರ ಸೇವಕರ ಸ್ಥಿತಿಗತಿಗಳು ಉತ್ತಮ ರೀತಿಯಲ್ಲಿ ಸಾಗುವಾಗ ನಮಗೆ ಯಾಕೆ ಈ ತರಹದ ಕಷ್ಟನಷ್ಟಗಳು? ಚಿಂತೆ ಮಾಡಬೇಡಿರಿ. ಯಾವ ಕಷ್ಟದಲ್ಲಿ ದುಃಖದಲ್ಲಿ, ಕಣ್ಣೀರಿನಲ್ಲಿ ಸೇವೆಯ ದಾರಿಯಲ್ಲಿ ಹೋಗುತ್ತೀರೋ ಆತನು ಅದನ್ನು ತನ್ನ ನೆನಪಿನ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುತ್ತಾನೆ. ಸರಿಯಾದ ಸಮಯದಲ್ಲಿ ದೇವರು ಅವರಿಗೆ ಆಶೀರ್ವಾದ ದಾಯಕವಾದ ಜೀವನವನ್ನು ಕೊಡುತ್ತಾನೆ. ಅದು ನಿಮಗೆ ಆಶೀರ್ವಾದದಾಯಕವಾಗುವುದು. ಯೆಹೋವನು ತನ್ನನ್ನು ನಿರೀಕ್ಷಿಸುವವರಿಗೂ ಹುಡುಕುವವರಿಗೂ ಮಹೋಪಕಾರಿಯಾಗಿದ್ದಾನೆ. (ಪ್ರಲಾಪಗಳು 3:25).

•••

RNI NO. 70107/98, Postal Regn. No. TN/CH (C)/195/18-20 WPP NO. TN/PMG(CCR)/WPP-219/18-20

# ECHO OF HIS CALL

**Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.**

**Annual Subscription : Rs. 100/-**
**Life Subscription : Rs. 2000/-**

The multifarious activities of **Echo of His Call Ministry** is supported by the free-will offerings and donations of the God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plantChurches.

If you would like to receive **ECHO OF HIS CALL** magazines regularly, please write to us. Whenever you change your postal or e-mail addresses, please do inform us your old and new addresses.

**Echo of His Call** is available in 16 languages in our websites also. You can read it by going into the site as well as downloading it and get blessed.

Your letters, prayer requests and your financial helps (by D.D., Cheque, M.O. etc.) to **ECHO OF HIS CALL** may be sent to the address below.

Please send your **Land Phone / Cell Phone Numbers and E.mail addresses** for updation.

**ECHO OF HIS CALL**
10, MOHAMMED ABDULLAH 2ND STREET, CHEPAUK
CHENNAI-600 005, INDIA
PH:(+91-44) 2852 8282, 2852 9293, 2854 7766,
Cell:(+91) 98410 71852, 95661 31858
E-mails: sam@echoofhiscall.org / biblecor@yahoo.co.in
Websites: www.echoofhiscall.org/ www.echoofhiscall.com
YOU CAN SEND YOUR DONATIONS ON ONLINE ALSO

## ದಯವಿಟ್ಟು ನಮ್ಮ ಸೇವೆಯ ಕುರಿತು ಪ್ರಾರ್ಥಿಸಿರಿ
**Please Pray for our Ministries at the Headquarters**

1. ಪ್ರಾರ್ಥನಾ ಸೇವೆ : 24 ತಾಸು
2. ಬಿಬ್ಲಿಯೋಕೋರ್-ಬೈಬಲ್ ಕರಸ್ಪಾಂಡೆನ್ಸ್ ಕೋರ್ಸ್, ಇಂಗ್ಲಿಷ್, ತಮಿಳು ಮತ್ತು ಹಿಂದಿ.
3. ಕರೆಯ ಪ್ರತಿಧ್ವನಿ ಮಾಸ ಪತ್ರಿಕೆ : ಕನ್ನಡ, ಇಂಗ್ಲಿಷ್, ತಮಿಳ್, ಮಲಯಾಳಂ, ತೆಲುಗು, ಹಿಂದಿ, ಸಿನ್ಹಾಳಿ, ಮರಾಠಿ, ಗುಜರಾತಿ, ಬೆಂಗಾಳಿ, ಓರಿಯಾ, ನೇಪಾಳಿ, ಅಸ್ಸಾಮಿ, ಪಂಜಾಬಿ, ಉರ್ದು ಮತ್ತು ಆಫ್ರಿಕಾನ್ಸ್
4. ನೆಹೆಮಿಯಾ ಬೈಬಲ್ ಕಾಲೇಜ್ (ಎರಡು ಕೇಂದ್ರಗಳು)
5. ಥಿಯೋಲೋಜಿಕಲ್ ಕರಸ್ಪಾಂಡೆನ್ಸ್ ಕೋರ್ಸ್ : ಇಂಗ್ಲೀಷ್ ಮತ್ತು ತಮಿಳು
6. ಪರಮಾದೇಶದಲ್ಲಿ ಪಾಲುಗಾರರು.
7. ತರಬೇತಿ ಕಾರ್ಯಕ್ರಮಗಳು
8. ಕರಪತ್ರ ಹಾಗೂ ಅನುಕರಣ ಸೇವೆ
10. ಸುವಾರ್ತಾ ಮುದ್ರಣಾಲಯ - ಪ್ರಕಾಶನ
9. ಸೆಂಟ್ ಪಾಲ್ಸ್ ಮೆಟ್ರಿಕ್ಯೂಲೇಷನ್ ಸ್ಕೂಲ್ — ಗ್ರಾಮೀಣ ಪ್ರದೇಶದ ಪ್ರೌಢ ಶಾಲೆ
11. ಸಬ್ಬತ್ ಶಾಲೆ — ಭಾನುವಾರ ಬೆಳಗ್ಗೆ 08.30 ಗಂಟೆಗೆ
12. ತಮಿಳು ಭಾಷೆಯಲ್ಲಿ ಆರಾಧನೆ — ಮುಂಜಾನೆ 05.00., 7.00 ಮತ್ತು 10.00 ಗಂಟೆಗೆ
13. ತೆಲುಗು ಭಾಷೆಯಲ್ಲಿ ಆರಾಧನೆ — ಭಾನುವಾರ ಸಾಯಂಕಾಲ 04.00 ಗಂಟೆಗೆ
14. ಹಿಂದಿ ಭಾಷೆಯಲ್ಲಿ ಆರಾಧನೆ — ಭಾನುವಾರ ಸಾಯಂಕಾಲ 05.00 ಗಂಟೆಗೆ
15. ಮಲಯಾಳಂ ಭಾಷೆಯಲ್ಲಿ ಆರಾಧನೆ — ಭಾನುವಾರ ಸಾಯಂಕಾಲ 05.00 ಗಂಟೆಗೆ
16. ಇಂಗ್ಲೀಷ್ ಹಾಗೂ ತಮಿಳು ಭಾಷೆಯಲ್ಲಿ ಆರಾಧನೆ — ಭಾನುವಾರ ಸಾಯಂಕಾಲ 06.00 ಗಂಟೆಗೆ
17. ಕರಪತ್ರ ವಿತರಣೆ — ಭಾನುವಾರ ಮಧ್ಯಾಹ್ನ 02.30 ಗಂಟೆಗೆ
18. ಸಭಾಪಾಲಕರಿಗೆ ಮಾರ್ಗದರ್ಶನ — ಭಾನುವಾರ ಸಾಯಂಕಾಲ 04.00 ಗಂಟೆಗೆ
19. ಮಹಿಳೆಯರ ಪ್ರಾರ್ಥನಾ ಕೂಟ — ಬುಧವಾರ ಸಾಯಂಕಾಲ 05.30 ಗಂಟೆಗೆ
20. ಮಧ್ಯವಾರದ ಆರಾಧನೆ — ಬುಧವಾರ ಸಾಯಂಕಾಲ 06.30 ಗಂಟೆಗೆ
21. ಪುರುಷರಿಗಾಗಿ ಪ್ರಾರ್ಥನಾ ಕೂಟ — ಶುಕ್ರವಾರ ಸಾಯಂಕಾಲ 06.30 ಗಂಟೆಗೆ
22. ಶನಿವಾರ ಆರಾಧನೆ — ಶನಿವಾರ ಸಾಯಂಕಾಲ 06.00 ಗಂಟೆಗೆ
23. ಕಾರ್ಮಿಕರ ಕೂಟ — ಶನಿವಾರ ಸಾಯಂಕಾಲ 06.00 ಗಂಟೆಗೆ
24. ಗೃಹ ಪ್ರಾರ್ಥನೆಗಳು — ಮಂಗಳವಾರ ಹಾಗೂ ಗುರುವಾರ ಸಾಯಂಕಾಲ 06.30 ಗಂಟೆಗೆ
25. ವಿಶೇಷ ಪವಿತ್ರ ರಾತ್ರಿ ಭೋಜನ ಸಂಸ್ಕಾರ — ಪ್ರತಿ ತಿಂಗಳಿನ ಮೊದಲನೆಯ ದಿನ ಮುಂಜಾನೆ 05.30 ಗಂಟೆಗೆ
26. ಸುವಾರ್ತಿಕರ ಕೂಟ — ಮೊದಲ ಶನಿವಾರ ಸಾಯಂಕಾಲ 05.30 ಗಂಟೆಗೆ
27. ಮಾತಾ-ಪಿತೃಗಳಿಗಾಗಿ ಪ್ರಾರ್ಥನೆ — ಪ್ರತಿ ಮೊದಲನೆಯ ಭಾನುವಾರ ಸಾಯಂಕಾಲ 04.00 ಗಂಟೆಗೆ
28. ಪೂರ್ಣ ರಾತ್ರಿ ಪ್ರಾರ್ಥನೆ — ಪ್ರತಿ 2ನೇ ಶುಕ್ರವಾರ ಸಾಯಂಕಾಲ 09.30 ಗಂಟೆಗೆ
29. ಉಪವಾಸ ಪ್ರಾರ್ಥನೆ — ಮೊದಲನೆ ಶನಿವಾರ ಬೆಳಿಗ್ಗೆ 09.30 ಗಂಟೆಗೆ
30. ಪವಿತ್ರ ರಾತ್ರಿ ಭೋಜನ ಸಂಸ್ಕಾರ — 2ನೇ ಭಾನುವಾರದ ಆರಾಧನೆಯಲ್ಲಿ
31. ಪ್ರಾತಃಕಾಲದ ಧ್ಯಾನ — ಪ್ರತಿದಿನ ಮುಂಜಾನೆ 05.00 ಗಂಟೆಗೆ
32. ಸಿಬ್ಬಂದಿ ವರ್ಗದ ಧ್ಯಾನ — ಪ್ರತಿದಿನ ಮುಂಜಾನೆ 09.00 ಗಂಟೆಗೆ
33. ಕಛೇರಿ (ಭಾನುವಾರ ಹೊರತುಪಡಿಸಿ) — ಮುಂಜಾನೆ 09.00ರಿಂದ ರಾತ್ರಿ 09.00ರ ವರೆಗೆ

**RNI NO. 70107/98**
**Postal Regn. No. TN/CH/(C)/195/18-20**
**WPP NO. TN/PMG(CCR)/WPP- 219/18-20**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th FEBRUARY 2020**

**If un-delivered please return to:**

**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from 18, Mohammed Abdullah Sahib Street, Chepauk, Chennai-600 005 and printed by him at **Echo of His Call Printers** 18, Mohammed Abdullah Sahib Street, Chepauk, Chennai-600 005. Editor: **S. Sam Selva Raj.**